بِسْمِ اللّٰهِ الرَّحْمٰنِ الرَّحِيْمِ   نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ   وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 06

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 10

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**06 ಮಾರ್ಚ್ 2025, 06 ಅಮಾನ್ 1404 ಹಿಜರಿ ಶಮ್ಸಿ,**
**05 ರಮಝ಼ಾನ್ 1446 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاسْتَعِيْنُوْا بِالصَّبْرِ وَالصَّلٰوةِ ؕ
وَاِنَّهَا لَكَبِيْرَةٌ اِلَّا
عَلَى الْخٰشِعِيْنَ

(ಅಲ್ ಬಖರ: 46)

ಅಂದರೆ: ಸಹನೆ ಮತ್ತು ಪ್ರಾರ್ಥನೆ ಮೂಲಕ ನೀವು ಸಹಾಯವನ್ನು ಯಾಚಿಸಿರಿ. ವಿನಯವಂತರಿಗೆ ಹೊರತು ಇತರರಿಗೆ ಇದು ಕಷ್ಟ ಸಾಧ್ಯ–

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಸೆಹ್ರಿ ತಿನ್ನುವುದರಲ್ಲಿ ಅನುಗ್ರಹವಿದೆ

**(1923)** ಹಝ್ರತ್ ಅನಸ್ ಬಿನ್ ಮಲಿಕ್(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಸೆಹ್ರಿಯನ್ನು ತಿನ್ನಿರಿ ಏಕೆಂದರೆ ಸೆಹ್ರಿ ಅನುಗ್ರಹಿಸಲ್ಪಟ್ಟಿದೆ.

### ತಪ್ಪಿ ತಿಂದು ಕುಡಿದವನು ತನ್ನ ಉಪವಾಸವನ್ನು ಪೂರ್ಣಗೊಳಿಸಬೇಕು

**(1933)** ಹಝ್ರತ್ ಅಬುಹುರೈರಾ(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಒಬ್ಬ ವ್ಯಕ್ತಿಯು ಉಪವಾಸದಲ್ಲಿ ತಪ್ಪಾಗಿ ತಿಂದರೆ ಅಥವ ಕುಡಿದರೆ, ಅವನು ತನ್ನ ಉಪವಾಸವನ್ನು ಪೂರ್ಣಗೊಳಿಸಬೇಕು ಏಕೆಂದರೆ ಅಲ್ಲಾಹನು ಅವನಿಗೆ ತಿನ್ನಿಸಿರುವುದು ಮತ್ತು ಕುಡಿಸಿರುವುದು.

### ಪ್ರಯಾಣದಲ್ಲಿ ಉಪವಾಸವು ಪುಣ್ಯವಲ್ಲ

**(1946)** ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ವರದಿ ಮಾಡುತ್ತಾರೆ ಅವರು ಹೇಳಿದರು: ಪ್ರವಾದಿ ಮುಹಮ್ಮದ್(ಸ) ಪ್ರಯಾಣದಲ್ಲಿದ್ದಾಗ ಒಂದು ಜನಜಂಗುಳಿಯನ್ನು ಮತ್ತು ಒಬ್ಬ ವ್ಯಕ್ತಿಯನ್ನು ನೋಡಿದರು. ಅವರು ಹೇಳಿದರು: ಇದು ಏನು? ಅದಕ್ಕೆ ಜನರು ಹೇಳಿದರು: ಓರ್ವ ಉಪವಾಸಿಗನಾಗಿದ್ದಾನೆ ಅದಕ್ಕೆ ಅವರು ಹೇಳಿದರು: ಪ್ರಯಾಣ ಮಾಡುವಾಗ ಉಪವಾಸದಿಂದ ಯಾವುದೇ ಪ್ರಯೋಜನವಿಲ್ಲ.

### ರಮಝ಼ಾನ್‌ನ ಬಿಟ್ಟು ಹೋಗಿರುವ ಉಪವಾಸಗಳು

**(1950)** ಅಬು ಸಲ್ಮ ಅವರಿಂದ ವರದಿಯಾಗಿದೆ: ಅವರು ಹೇಳಿದರು: ಹಝ್ರತ್ ಆಯೆಶಾ(ರ) ಹೇಳುವುದನ್ನು ನಾನು ಕೇಳಿದ್ದೇನೆ: ರಮಝ಼ಾನ್ ಉಪವಾಸವು ನನ್ನ ಮೇಲೆ ಕಡ್ಡಾಯವಾದಾಗ ನಾನು ಅವುಗಳನ್ನು ಪೂರ್ಣಗೊಳಿಸದಿದ್ದರೆ ನಾನು ಅವುಗಳನ್ನು ಶಾಅ್‌ಬಾನ್ ಮಾಸದಲ್ಲಿ ಪೂರೈಸುತ್ತಿದ್ದೆ. ಯಾಹ್ಯಾ ಹೇಳಿದರು: ಪ್ರವಾದಿ(ಸ) ರವರ ಕಾರ್ಯಮಗ್ನತೆಯಿಂದಾಗಿ ಅಥವಾ ಅವರು ಪ್ರವಾದಿ(ಸ) ಅವರ ಸೇವೆಯಲ್ಲಿ ನಿರತರಾಗಿದ್ದರಿಂದ.

**(ಸಹೀಹ್ ಬುಖಾರಿ, ಸಂಪುಟ 3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

## ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ.

اللہ تعالیٰ قرآن کریم میں فرماتا ہے:: شَهْرُ رَمَضَانَ الَّذِيْٓ اُنْزِلَ فِيْهِ الْقُرْاٰنُ هُدًى لِّلنَّاسِ وَبَيِّنٰتٍ مِّنَ الْهُدٰى وَالْفُرْقَانِ ۚ فَمَنْ شَهِدَ مِنْكُمُ الشَّهْرَ فَلْيَصُمْهُ ۗ وَمَنْ كَانَ مَرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ ۗ يُرِيْدُ اللّٰهُ بِكُمُ الْيُسْرَ وَلَا يُرِيْدُ بِكُمُ الْعُسْرَ ۖ وَلِتُكْمِلُوا الْعِدَّةَ وَلِتُكَبِّرُوا اللّٰهَ عَلٰى مَا هَدٰىكُمْ وَلَعَلَّكُمْ تَشْكُرُوْنَ ۝ وَاِذَا سَاَلَكَ عِبَادِيْ عَنِّيْ فَاِنِّيْ قَرِيْبٌ ۗ اُجِيْبُ دَعْوَةَ الدَّاعِ اِذَا دَعَانِ ۙ فَلْيَسْتَجِيْبُوْا لِيْ وَلْيُؤْمِنُوْا بِيْ لَعَلَّهُمْ يَرْشُدُوْنَ ۝ (بقرہ: 186-187)

ಅಂದರೆ :: ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝ಼ಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ. ಆದರೆ ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಆ ಸಂಖ್ಯೆಯನ್ನು ಪೂರ್ತಿಗೊಳಿಸಲಿ.ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ; ನಿಮಗೆ ಕಷ್ಟ ಕೊಡಲು ಇಚ್ಛಿಸುವುದಿಲ್ಲ. (ಇದು) ನೀವು ಸಂಖ್ಯೆಯನ್ನು ಪೂರ್ಣಗೊಳಿಸಲಿಕ್ಕೂ ನಿಮಗೆ ಮಾರ್ಗದರ್ಶನ ಮಾಡಿದುದಕ್ಕಾಗಿ ಅಲ್ಲಾಹನ ಸ್ತುತಿಕೀರ್ತನ ಮಾಡಲಿಕ್ಕೂ ನೀವು ಕೃತಜ್ಞತೆ ಸೂಚಿಸಲಿಕ್ಕೂ ಆಗಿದೆ. (ಎಲೈ ಪ್ರವಾದಿ,) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು)– ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ. **(ಅಲ್‌ಬಖರ:186–187)**

**ಅಲ್ಲಾಹನು ಸರ್ವಶಕ್ತನಾಗಿದ್ದಾನೆ, ಕ್ಷಯರೋಗಿಗೆ ಬೇಕಿದ್ದರೆ ಉಪವಾಸದ ಶಕ್ತಿಯನ್ನು ನೀಡಬಲ್ಲ ಈ ಪವಿತ್ರ ಮಾಸದಲ್ಲಿ ನೀನು ನನ್ನನ್ನು ವಂಚಿತಗೊಳಿಸಬೇಡ ಎಂದು ಓರ್ವ ವ್ಯಕ್ತಿಯು ಪ್ರಾಮಾಣಿಕವಾಗಿ ಸರ್ವಶಕ್ತನಲ್ಲಿ ಕೇಳಿಕೊಂಡರೆ, ಅಲ್ಲಾಹನು ಅವನನ್ನು ವಂಚಿತಗೊಳಿಸುವುದಿಲ್ಲ.**

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಮನುಷ್ಯನು ತನ್ನ ಸಾಮರ್ಥ್ಯಕ್ಕನುಗುಣವಾಗಿ ಅಲ್ಲಾಹನ ಕರ್ತವ್ಯಗಳನ್ನು ನಿರ್ವಹಿಸುತ್ತಿರಬೇಕು. ಉಪವಾಸದ ಕುರಿತು, ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನುಡಿಯುತ್ತಾನೆ: **ವಅನ್ ತಸೂಮು ಖೈರುಲ್ಲಕುಮ್** (ಅಲ್–ಬಖರ: 185) ಅಂದರೆ: ನೀವು ಉಪವಾಸವನ್ನು ಅನುಷ್ಠಿಸಿದರೆ ಅದು ನಿಮಗಾಗಿ ಬಹಳ ಅನುಗ್ರಹದಾಯಕವಾಗಿದೆ.

ಫಿದ್ಯ (ಓರ್ವ ನಿರ್ಗತಿಕನಿಗೆ ಆಹಾರ ನೀಡುವುದು) ಏಕೆ ವಿಧಿಸಲ್ಪಟ್ಟಿದೆಯೋ ಎಂದು ಒಮ್ಮೆ ನನ್ನ ಮನಸ್ಸಿಗೆ ಬಂದಿತು, ಆಗ ಅದು ತೌಫೀಖ್ ಪಡೆಯುವುದಕ್ಕೆ ಎಂದು ನನಗೆ ತಿಳಿಯಿತು, ಆದ್ದರಿಂದ ಆತನಿಗೆ ಉಪವಾಸ ಅನುಷ್ಠಾನಕ್ಕೆ ತೌಫೀಖ್ ಸಿಗುತ್ತದೆ. ಸರ್ವಶಕ್ತನಾದ ಅಲ್ಲಾಹನು ಮಾತ್ರ ತೌಫೀಖ್ ನೀಡುವವನಾಗಿದ್ದಾನೆ. ಅದೇ ರೀತಿ ಪ್ರತಿಯೊಂದು ವಸ್ತುವು ಅಲ್ಲಾಹನಿಂದಲೇ ಬಯಬೇಕು. ಅಲ್ಲಾಹನು ಸರ್ವಶಕ್ತನಾಗಿದ್ದಾನೆ, ಕ್ಷಯರೋಗಿಗೆ ಬೇಕಿದ್ದರೆ ಉಪವಾಸದ ಶಕ್ತಿಯನ್ನು ನೀಡಬಲ್ಲನು ಆದ್ದರಿಂದ ಫಿದ್ಯದ ಉದ್ದೇಶವು ಆ ಶಕ್ತಿಪಡೆಯುವುದಾಗಿದೆ ಮತ್ತೆ ಇದು ಅಲ್ಲಾಹನ ಅನುಗ್ರಹದಿಂದ ಸಾಧ್ಯವಾಗುತ್ತದೆ. ನನಗೆ ಖಾತ್ರಿ ಇರುವುದೇನೆಂದರೆ ಇದೊಂದು ನಿನ್ನ ಪವಿತ್ರ ಮಾಸವಾಗಿದೆ ಅದರಿಂದ ನಾನು ವಂಚಿತನಾಗುತ್ತಿದ್ದೇನೆ ಮುಂದಿನ ವರ್ಷ ನಾನು ಬದುಕಿರುತ್ತೇನೋ ಇಲ್ಲವೋ ಗೊತ್ತಿಲ್ಲ. ನಾನು ಈ ತಪ್ಪಿದ ಉಪವಾಸಗಳನ್ನು ಮತ್ತೆ ಅನುಷ್ಠಿಸಲು ಸಾಧ್ಯವಾಗುತ್ತದೆಯೋ ಇಲ್ಲವೊ ನನಗೆ ತಿಳಿದಿಲ್ಲ. ಹೀಗೆ ಅವನು ಅಲ್ಲಾಹನಲ್ಲಿ ಸಹಾಯಕ್ಕಾಗಿ ಪ್ರಾರ್ಥಿಸಿದರೆ, ಅಂತಹ ಮನಸ್ಸಿಗೆ ಅಲ್ಲಾಹನು ಶಕ್ತಿಯನ್ನು ನೀಡುತ್ತಾನೆ.

ಅಲ್ಲಾಹನು ಇಚ್ಛಿಸಿದ್ದರೆ, ಅವನು ಇತರ ಉಮ್ಮತ್‌ಗಳಂತೆ ಈ ಉಮ್ಮತ್ತಿನಲ್ಲಿ ಯಾವ ಮಾನದಂಡಗಳನ್ನು ಇರಿಸುತ್ತಿರಲಿಲ್ಲ, ಆದರೆ ಅವನು ಮಾನದಂಡಗಳನ್ನು ಒಳ್ಳೆಯದಕ್ಕಾಗಿ ಇರಿಸಿದ್ದಾನೆ, ನನ್ನ ದೃಷ್ಟಿಯಲ್ಲಿ ಓರ್ವ ಮನುಷ್ಯ ನೈಜ್ಯವಾಗಿ ಹಾಗೂ ಸಂಪೂರ್ಣ ವಿಧೇಯನಾಗಿ ಅಲ್ಲಾಹನ ಆಸ್ತಾನದಲ್ಲಿ ಈ ಪವಿತ್ರ ಮಾಸಲದಲ್ಲಿ ನೀನು ನನಗೆ ವಂಚಿತನಾಗಿಸಬೇಡ ಎಂದು ಕೇಳಿಕೊಂಡರೆ ಅಲ್ಲಾಹನು ಅವನನ್ನು ವಂಚಿತನಾಗಿಸುವುದಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಮನುಷ್ಯನು ರಮಝ಼ಾನ್ ಮಾಸದಲ್ಲಿ ರೋಗಗ್ರಸ್ತನಾದರೆ ಅವನ ಆ ರೋಗವು ಅವನಿಗಾಗಿ (ರಹ್ಮತ್) ಅನುಗ್ರಹವಾಗಿರುವುದು. ಏಕೆಂದರೆ ಪ್ರತಿಯೊಂದು ಕಾರ್ಯವು ನಿಯತ್ತಿನಲ್ಲಿ ಅವಲಂಬಿತವಾಗಿದೆ. ಆದ್ದರಿಂದ ಮೂಮಿನ್ ತನ್ನ ಅಸ್ತಿತ್ವದಿಂದ ತನ್ನನ್ನು ಅಲ್ಲಾಹನ ಮಾರ್ಗದಲ್ಲಿ ಧೈರ್ಯಶಾಲಿ ಎಂದು ಸಾಬಿತುಗೊಳಿಸಬೇಕು. ಯಾವ ವ್ಯಕ್ತಿಯು ಉಪವಾಸದಿಂದ ವಂಚಿತನಾಗಿರುತ್ತಾನೊ, ಆದರೆ ಅವನ ಮನಸ್ಸಿನಲ್ಲಿ ಆತನು ಆರೋಗ್ಯವಂತನಾಗಿರುತ್ತಿದರೆ ಅವನು ಸಹ ಉಪವಾಸಗಳನ್ನು ಅನುಷ್ಠಿಸುತ್ತಿದ್ದನು ಎಂಬ ನಿಯ್ಯತ್ ಹಾಗೂ ನೋವು ಇದ್ದರೆ ದೇವದೂತರು ಅವನಿಗಾಗಿ ಉಪವಾಸ ಮಾಡುತ್ತಾರೆ. ಅದಕ್ಕೆ ಶರತ್ತು ಏನೆಂದರೆ ಆತನು ನೆಪ ಮಾಡುವವನಾಗಬಾರದು ಹೀಗಿದ್ದಲ್ಲಿ ಸರ್ವಶಕ್ತನಾದ ಅಲ್ಲಾಹನು ಅವನಿಗೆ ಪ್ರತಿಫಲದಿಂದ ವಂಚಿತನಾಗಿರಿಸುವುದಿಲ್ಲ.

**(ಮಲ್‌ಫೂಝಾತ್, ಸಂಪುಟ–3, ಪುಟ–426, ಪ್ರಕಟಿತ 2018 ಖಾದಿಯನ್)**

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್(ಸ) ಹೇಳಿದರು:
"ಓ ಇಬ್ನ್ ಔಫ್! ಈ ಧ್ವಜವನ್ನು ತೆಗೆದುಕೊಂಡು ನೀವೆಲ್ಲರೂ ದೇವರ ಮಾರ್ಗದಲ್ಲಿ ಜಿಹಾದ್‌ಗಾಗಿ ಹೊರಟು ಅವಿಶ್ವಾಸಿಗಳ ವಿರುದ್ಧ ಹೋರಾಡಿ, ಆದರೆ ಯಾವುದೇ ವಿಶ್ವಾಸಘಾತುಕತನವನ್ನು ಮಾಡದಂತೆ, ಯಾವುದೇ ಒಪ್ಪಂದವನ್ನು ಮುರಿಯದಂತೆ, ಶತ್ರುಗಳ ಮೃತರ ದೇಹಗಳನ್ನು ವಿರೂಪಗೊಳಿಸದಂತೆ ಅಥವಾ ಮಕ್ಕಳನ್ನು ಕೊಲ್ಲದಂತೆ ಜಾಗರೂಕರಾಗಿರಿ. ಇದು ದೇವರ ಆಜ್ಞೆ ಮತ್ತು ಅವನ ಪ್ರವಾದಿಯ ಸುನ್ನತ್ ಆಗಿದೆ."

ಈ ವರದಿಯಲ್ಲಿ, ವರದಿಗಾರರು ಬಹುಶಃ ಮಹಿಳೆಯರ ಉಲ್ಲೇಖವನ್ನು ತಪ್ಪಾಗಿ ಬಿಟ್ಟುಬಿಟ್ಟಿರಬಹುದು, ಇಲ್ಲದಿದ್ದರೆ ಬೇರೆಡೆ ಸ್ಪಷ್ಟವಾಗಿ ಹೇಳಲಾಗಿದೆ, ಹಝ್ರತ್ ಪೈಗಂಬರ್(ಸ) ಒಂದು ಪಡೆಯನ್ನು ಕಳುಹಿಸಿದಾಗ, ಮಹಿಳೆಯರನ್ನು ಕೊಲ್ಲಬಾರದು, ವೃದ್ಧರನ್ನು ಕೊಲ್ಲಬಾರದು ಅಥವಾ ಧಾರ್ಮಿಕ ಸೇವೆಗೆ ಮೀಸಲಾಗಿರುವ ಜನರನ್ನು ಕೊಲ್ಲಬಾರದು ಎಂದು ಅವರು(ಸ) ಒತ್ತಿ ಹೇಳಿರುವರು.

**ಸರಿಯ್ಯ ಝೈದ್ ಬಿನ್ ಹಾರಿಸ(ರ), ಸರಿಯ್ಯ ವಾದಿ ಅಲ್‌ಖುರಾ, ಸರಿಯ್ಯ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಸರಿಯ್ಯ ಅಲಿ ಇಬ್ನೆ ತಾಲಿಬ್(ರ) ಮತ್ತು ಸರಿಯ್ಯ ಹಝ್ರತ್ ಅಬೂಬಕರ್(ರ) ವಿನ ಸನ್ನಿವೇಶಗಳು ಹಾಗೂ ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

ಹಝ್ರತ್ ಮುಸ್ಲಿಹ್ ಮೌಊದ್(ರ)ರ ನಿರ್ದೇಶನ ಪ್ರಕಾರ ಭಾರತ ವಿಭಜನೆಯ ಸಮಯದಲ್ಲಿ 313 ದರವೇಶುಗಳು ಖಾದಿಯಾನಿನಲ್ಲಿ ನೆಲೆಸಿದ್ದರು. ನಿಧನಗೊಂಡ ದರ್‌ವೇಶ್‌ಗಳಲ್ಲಿ ಇವರು ಕೊನೆಯ ದರ್‌ವೇಶ್ ಆಗಿದ್ದರು. ಈಗ ಖಾದಿಯಾನಿನಲ್ಲಿ ಯಾರೂ ದರ್‌ವೇಶ್ ಉಳಿದಿಲ್ಲ.
ಖಾದಿಯಾನಿನಲ್ಲಿ ಇಂದು ಆರಂಭಿಸಿದ್ದು ದರ್‌ವೇಶ್‌ಗಳಿಲ್ಲದ ಮೊದಲ ಜಲ್ಸ ಆಗಿದೆ. ತ್ಯಾಗಶೀಲರಾದ ಈ ಹಿರಿಯರ ರೂಢಿಗಳನ್ನು ನೆಲೆನಿಲ್ಲಿಸುತ್ತಾ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಖಾದಿಯಾನಿನಲ್ಲಿ ತಮ್ಮ ಜೀವಿತವನ್ನು ಸಾಗಿಸುವುದು ಖಾದಿಯಾನಿನಲ್ಲಿ ನೆಲೆಸಿರುವ ಹೊಸ ಪೀಳಿಗೆಯ ಕೆಲಸವಾಗಿದೆ. ಅಲ್ಲಾಹನು ಅವರಿಗೆ ಅದರ ಸೌಭಾಗ್ಯ ನೀಡಲಿ.

ಮಾನ್ಯ ತೈಯಬ್ ಅಲೀ ಸಾಹಿಬ್ ಬಂಗಾಲಿ ದರವೇಶ್ ಖಾದಿಯಾನ್, ಮಾನ್ಯ ಮಿರ್ಝಾ ಮುಹಮ್ಮದ್ದೀನ್ ನಾಝ್ ಸಾಹಿಬ್ ಸದರ್ ಸದರ್ ಅಂಜುಮನ್ ಅಹಮ್ದಿಯಾ ರಬ್ವಾಹ್ ಪಾಕಿಸ್ತಾನ್ ಹಾಗೂ ಅಕ್‌ಮುರಾತ್ ಖಾಕೆಯೇಫ್ ಸಾಹಿಬ್ ತುರ್ಕಮಾನಿಸ್ತಾನದ ರಾಷ್ಟ್ರೀಯ ಅಧ್ಯಕ್ಷರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗ್ಹಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **27-12-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ
أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ
اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔
اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔
صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದು ಸಹ ಕೆಲವು ಯುದ್ಧ ಕಾರ್ಯಾಚರಣೆಗಳ ಬಗ್ಗೆ ಪ್ರಸ್ತಾಪಿಸುತ್ತೇನೆ. ಸರಿಯ್ಯ ಝೈದ್ ಬಿನ್ ಹಾರಿಸರ ಹೆಸರಿನಲ್ಲಿ ಒಂದು ಕಾರ್ಯಾಚರಣೆಯ ಪ್ರಸ್ತಾಪ ಚರಿತ್ರೆಯಲ್ಲಿದೆ. ಈ ಕಾರ್ಯಾಚರಣೆ ಹಿಜರೀ 6, ಜಮಾದಿಯುಲ್ ಆಖಿರ್ ಮಾಸದಲ್ಲಿ ಜಝ್ಝಾಮಿನ ಒಂದು ಪಟ್ಟಣವಾದ ಹಿಸ್‌ಮಾದಲ್ಲಿ ನಡೆದಿತ್ತು. ಹಿಸ್ಮಾ ಬನು ಜುಝಾಮ್‌ನ ಒಂದು ಪಟ್ಟಣವಾಗಿದ್ದು, ಮದೀನಾದಿಂದ ಎಂಟು ರಾತ್ರಿಗಳ ದೂರದಲ್ಲಿತ್ತು. ಆ ಕಾಲದ ಪ್ರಯಾಣದ ಪ್ರಕಾರ, ಪ್ರಯಾಣವು ಸಾಕಷ್ಟು ದೀರ್ಘವಾಗಿತ್ತು. ಈ ಕಾರ್ಯಚರಣೆಯು ನಿಸ್ಸಂದೇಹವಾಗಿ ಹುದೈಬಿಯಾ ಒಪ್ಪಂದದ ನಂತರದ್ದಾಗಿದೆ, ಅಂದರೆ ಹಿಜ್ರಿಯ 7ನೇ ವರ್ಷದ್ದಾಗಿದೆ ಎಂದು ಅಲ್ಲಾಮಾ ಇಬ್ನ್ ಖಯ್ಯಿಮ್ ಝಾದ್ ಅಲ್-ಮಾದ್‌ನಲ್ಲಿ ಹೇಳಿದ್ದಾರೆ.

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ.ಅ) ಎಂ.ಎ. ಪುಟ-681)

(ಸಬ್ಲುಲ್ ಹುದಾ ವರ್ರಶಾದ್, ಸಂಪುಟ-06, ಪುಟ-89, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಫಹಾರ್ಂಗ್ ಸೀರತ್, ಪುಟ-102, ಝುವಾರ್ ಅಕಾಡೆಮಿ, ಕರಾಚಿ)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಈ ಸರಿಯ್ಯದ ದಿನಾಂಕದ ಬಗ್ಗೆ ಒಂದು ಸಂದೇಹವಿದೆ. ಅದನ್ನು ಪ್ರಸ್ತಾಪಿಸುವುದು ಮುಖ್ಯ. ಇಬ್ನು ಸಅದ್ ಮತ್ತು ಅವರನ್ನು ಅನುಸರಿಸುತ್ತಾ ಇತರ ಕೆಲವು ಚರಿತ್ರೆಗಾರರು ಈ ಸರಿಯ್ಯದ ದಿನಾಂಕ ಹಿಜರೀ 6, ಜಮಾದಿಯುಲ್ ಆಖಿರ್ ಎಂದು ಬರೆದಿರುವರು ಮತ್ತು ಅದನ್ನೇ ಸರಿ ಎಂದು ಹೇಳಿದ್ದಾರೆ ಆದರೆ ಈ ಸರಿಯ್ಯ ಹಿಜರೀ ಏಳರಲ್ಲಿ, ಹುದೈಬಿಯಾ ಸಂಧಿಯ ನಂತರ ನಡೆದಿತ್ತು ಎಂದು ಅಲ್ಲಾಮ ಇಬ್ನು ಖಯ್ಯಿಮ್ ಝಾದುಲ್ ಮಆದ್‌ನಲ್ಲಿ ಹೇಳಿರುವರು. ಮತ್ತು ಇಬ್ನ್ ಅಲ್-ಖಯ್ಯಿಮ್ ಅವರ ಹೇಳಿಕೆಯ ಆಧಾರವೆಂದರೆ ಈ ಕಾರ್ಯಚರಣೆಯ ಕಾರಣವೆಂದರೆ **ದಿಹಿಯಾ ಕಲ್ಬಿ** ಸೀಸರ್ ಅವರನ್ನು ಭೇಟಿಯಾದ ನಂತರ ಮದೀನಾಗೆ ಹಿಂದಿರುಗುತ್ತಿದ್ದರು, ಆದರೆ ದಾರಿಯಲ್ಲಿ ಬನೂ ಜುಝಾಮ್ ಅವರನ್ನು ಲೂಟಿ ಮಾಡಿದರು, ಮತ್ತು ಹುದೈಬಿಯಾ ಒಪ್ಪಂದದ ನಂತರ ಹಝ್ರತ್ ಪೈಗಂಬರ್(ಸ) ದಿಹಿಯಾ ಅವರನ್ನು ಸೀಸರ್‌ಗೆ ಪತ್ರದೊಂದಿಗೆ ಕಳುಹಿಸಿದ್ದಾರೆ ಎಂಬುದು ಖಚಿತ. ಆದ್ದರಿಂದ, ಈ ಘಟನೆಯು ಹುದೈಬಿಯಾಕ್ಕಿಂತ ಮೊದಲು ಸಂಭವಿಸಲು ಸಾಧ್ಯವಿಲ್ಲ. ಈ ವಾದವು ಸ್ವತಃ ಸಾಕಷ್ಟು ಸ್ಪಷ್ಟವಾಗಿದೆ, ಮತ್ತು ಅದರ ಬೆಳಕಿನಲ್ಲಿ, ಇಬ್ನ್ ಸಅದ್ ಅವರ ವರದಿಯು ಖಂಡಿತವಾಗಿಯೂ ನಿರಾಕರಿಸಬಹುದಾದದು, ಆದರೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಸಾಹಿಬ್ ಬರೆಯುತ್ತಾರೆ: "ನನ್ನ ಅಭಿಪ್ರಾಯದಲ್ಲಿ ಒಂದು ವಿಷಯವನ್ನು ಅಲ್ಲಾಮ ಇಬ್ನು ಖಯ್ಯಿಮ್ ಕಡೆಗಣಿಸಿರುವರು. ಅದೇನೆಂದರೆ, ಇರಾನಿನ ಅರಸನನ್ನು ಭೇಟಿಯಾಗಲು ಸಿರಿಯಾಗೆ ದಿಹ್‌ಯ ಎರಡು ಬಾರಿ ಹೋಗಿರುವ ಸಾಧ್ಯತೆಯಿದೆ. ಮೊದಲ ಬಾರಿಗೆ ಹುದೈಬಿಯಾ ಸಂಧಿಗೆ ಮುಂಚೆ ವ್ಯಾಪಾರಕ್ಕಾಗಿ ಸ್ವತಃ ಹೋಗಿರಬಹುದು ಮತ್ತು ಅರಸನನ್ನು ಭೇಟಿಯಾಗಿರಬಹುದು. ಎರಡನೇ ಬಾರಿ ಹುದೈಬಿಯಾ ಸಂಧಿಯ ನಂತರ ಹಝ್ರತ್ ಪೈಗಂಬರ್(ಸ)ರ ಪತ್ರವನ್ನು ತೆಗೆದುಕೊಂಡು ಹೋಗಿರಬಹುದು. ಈ ಯಾತ್ರೆಯಲ್ಲಿ ದಿಹ್‌ಯನ ಬಳಿ ವ್ಯಾಪಾರ ಸಾಮಾನುಗಳಿತ್ತು ಎಂದು ಇಬ್ನು ಇಸ್‌ಹಾಖ್ ಹೇಳಿರುವುದು ಈ ವಾದಕ್ಕೆ ಪುಷ್ಠಿ ನೀಡುತ್ತದೆ. ಹುದೈಬಿಯ ಸಂಧಿಯ ನಂತರದ ಯಾತ್ರೆಯಲ್ಲಿ ವ್ಯಾಪಾರ ಸಾಮಾನುಗಳು ಇದ್ದದ್ದಾಗಿ ಯಾವುದೇ ಪ್ರಸ್ತಾಪವಿಲ್ಲ. ದಹ್‌ಯನ ಈ ಯಾತ್ರೆ ವ್ಯಾಪಾರ ಉದ್ದೇಶಕ್ಕಾಗಿ ಆಗಿರಬಹುದು ಮತ್ತು ಇಬ್ನು ಸಅ್‌ದ್‌ರ ವರದಿಗಾರ ದಹ್‌ಯರ ಎರಡನೇ ಯಾತ್ರೆಯನ್ನು ಈ ಯಾತ್ರೆಯೊಂದಿಗೆ ಜೋಡಿಸಿ ಅರಸನ ಭೇಟಿಯನ್ನು ಎರಡೂ ಒಂದೇ ಎಂದು ಅನುಮಾನಿಸಿರಬಹುದು. ಅಲ್ಲಾಹನೇ ಬಲ್ಲನು." (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-682)

ಕಾರ್ಯಾಚರಣೆಯ ಸಂದರ್ಭಗಳು ಮತ್ತು ಘಟನೆಗಳ ಕುರಿತು ಹೆಚ್ಚಿನ

ವಿವರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಇಬ್ನ್ ಇಸ್‌ಹಾಕ್ ವರದಿ ಮಾಡಿದ್ದಾರೆ. ರಿಫಾಅ ಬಿನ್ ಝೈದ್ ಜುಝಾಮಿ ಅವರು ಹಝ್ರತ್ ಪೈಗಂಬರ್(ಸ) ರವರ ಪತ್ರದೊಂದಿಗೆ ತಮ್ಮ ಜನರ ಬಳಿಗೆ ಬಂದರು. ಹಝ್ರತ್ ಪೈಗಂಬರ್(ಸ)ರು ಅವರನ್ನು ಇಸ್ಲಾಮಿನ ಕಡೆಗೆ ಆಹ್ವಾನಿಸುತ್ತಿದ್ದರು. ಈ ಜನರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಈ ಅವಧಿಯಲ್ಲಿ, ಹಝ್ರತ್ ದಿಹ್‌ಯಾ ಬಿನ್ ಖಲೀಫಾ ಕಲ್ಬಿ ರೋಮ್ ಅರಸ ಸೀಸರ್ ನ ಸನ್ನಿಧಿಯಿಂದ ಹಿಂದಿರುಗುತ್ತಿದ್ದರು. ಹಝ್ರತ್ ಪೈಗಂಬರ್(ಸ)ರು ಅವರನ್ನು ರೋಮನ್ ಅರಸನ ಬಳಿಗೆ ಕಳುಹಿಸಿದರು. ಆ ಅರಸನು ಅವರಿಗೆ ಉಡುಗೊರೆಗಳನ್ನು ನೀಡಿ ಉತ್ತಮ ಬಟ್ಟೆಗಳನ್ನು ತೊಡಿಸಿದನು. ದಾರಿಯಲ್ಲಿ ಅವರು ಹುನೈದ್ ಬಿನ್ ಊಸ್ ಮತ್ತು ಅವರ ಪುತ್ರ ಊಸ್ ಬಿನ್ ಹುನೈದ್ ಅವರನ್ನು ಭೇಟಿಯಾದರು. ಇಬ್ನ್ ಸಅದ್ ರ ಪ್ರಕಾರ, ಹುನೈದ್ ಇಬ್ನ್ ಅರಿದ್ ಮತ್ತು ಅವನ ಪುತ್ರ ಅರಿದ್ ಇಬ್ನ್ ಹುನೈದ್ ಸುಲೈ ಬೇಟಿಯಾದರು ಎಂದು ಹೇಳಿದ್ದಾರೆ ಮತ್ತು **ಸುಲೈ** ಎಂಬುದು ಜುಝಾಮ್ ಗೋತ್ರದ ಒಂದು ಶಾಖೆಯಾಗಿದೆ. ಅವರಿಬ್ಬರೂ ಹಝ್ರತ್ ದಹಿಯ್ಯರ ಮೇಲೆ ದಾಳಿ ಮಾಡಿ ಎಲ್ಲವನ್ನೂ ಲೂಟಿ ಮಾಡಿದರು, ಅವರ ಬಳಿ ಒಂದು ಹಳೆಯ ಬಟ್ಟೆಯ ತುಂಡನ್ನು ಹೊರತುಪಡಿಸಿ ಬೇರೇನೂ ಉಳಿದಿಲ್ಲ. ಈ ಸುದ್ದಿ ರಿಫಾಅ ಬಿನ್ ಝೈದ್ ಗೋತ್ರದ ಬನೂ ಝುಬೈಬ್ ಗೋತ್ರದವರಿಗೆ ತಲುಪಿತು. ಈ ಗೋತ್ರವು ಇಸ್ಲಾಂಗೆ ಮತಾಂತರಗೊಂಡಿತ್ತು. ಈ ಗೋತ್ರದ ಜನರು ಹುನೈದ್ ಮತ್ತು ಅವನ ಪುತ್ರದ ಕಡೆಗೆ ಹೊರಟರು. ಅವರು ಇಬ್ಬರೊಂದಿಗೂ ಹೋರಾಡಿ ಹಝ್ರತ್ ದಿಹಿಯಾ ಅವರ ಸಂಪತ್ತನ್ನು ರಕ್ಷಿಸಿದರು. ಹಝ್ರತ್ ದಿಹಿಯಾ(ರ) ಹಝ್ರತ್ ಪೈಗಂಬರ್(ಸ) ರ ಬಳಿಗೆ ಬಂದರು. ಅವರು ತನ್ನೊಂದಿಗೆ ನಡೆದ ಸಂಪೂರ್ಣ ಘಟನೆಯನ್ನು ಹಝ್ರತ್ ಪೈಗಂಬರ್(ಸ) ರವರಿಗೆ ತಿಳಿಸಿ, ಹುನೈದ್ ಮತ್ತು ಅವರ ಪುತ್ರನ ಮೇಲೆ ಸೇಡು ತೀರಿಸಿಕೊಳ್ಳಲು ಹಝ್ರತ್ ಪೈಗಂಬರ್(ಸ) ರವರನ್ನು ವಿನಂತಿಸಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಝೈದ್ ಬಿನ್ ಹಾರಿಸಾ(ರ) ಅವರನ್ನು ಐದು ನೂರು ಜನರೊಂದಿಗೆ ಕಳುಹಿಸಿದರು ಮತ್ತು ಹಝ್ರತ್ ದಿಹಿಯಾ ಅವರನ್ನು ಸೈನ್ಯದೊಂದಿಗೆ ಹಿಂದಿರುಗಿಸಿದರು. ಹಝ್ರತ್ ಝೈದ್(ರ.ಅ) ರಾತ್ರಿಯಲ್ಲಿ ಪ್ರಯಾಣಿಸುತ್ತಿದ್ದರು ಮತ್ತು ಹಗಲಿನಲ್ಲಿ ಅಡಗಿಕೊಳ್ಳುತ್ತಿದ್ದರು, ಮತ್ತು ಅವರೊಂದಿಗೆ ಬನೂ ಉಝ್ರಾನ ಓರ್ವ ಮಾರ್ಗದರ್ಶಕನೂ (ದಾರಿ ತೋರಿಸುವವನು) ಇದ್ದನು. ಅಲ್ಲಿ, ಬನು ಜುಝಾಮ್‌ನ ಕೆಲವು ಗೋತ್ರದ ಜನರು ಒಟ್ಟುಗೂಡಿದವು. ಅವರಲ್ಲಿ ಇಡೀ ಫತ್‌ಫಾನ್ ಗೋತ್ರದ ಜನರೂ ಇದ್ದರು. ಅವರಲ್ಲಿ ವಾಯಿಲ್, ಸಲಾಮಾನ್ ಮತ್ತು ಸಅದ್ ಬಿನ್ ಹುದೈಮ್ ಗೋತ್ರದ ಕೆಲವರು ಇದ್ದರು. ಹಝ್ರತ್ ಪೈಗಂಬರ್(ಸ) ರವರ ಪತ್ರದೊಂದಿಗೆ ರಿಫಾಅ ಬಿನ್ ಝೈದ್ ತನ್ನ ಜನರ ಬಳಿಗೆ ಬಂದಾಗ, ಅವರು ಹರ್ರತ್ ಅಲ್-ರಜ್ಲಾದಲ್ಲಿದ್ದರು. ಹರ್ರ ಅಲ್-ರಾಜ್ಲಾ ಪ್ರದೇಶವು ಜುಝಾಮ್ ಪ್ರದೇಶದ ಕಲ್ಲಿನ ಭೂಮಿಯಾಗಿತ್ತು ಮತ್ತು ರಿಫಾ'ಅ ಕುರಾ'ಅ ರಬ್ಬಾ ಪ್ರದೇಶದಲ್ಲಿತ್ತು. ಕುರಾಅ ರಬ್ಬಾ ಬಗ್ಗೆ ಬರೆಯಲಾಗಿದೆ, ಅದು ಬನೂ ಜುಝಾಮ್ ಪ್ರದೇಶದ ಒಂದು ಸ್ಥಳವಾಗಿತ್ತು. ಈ ಘಟನೆಯ ಬಗ್ಗೆ ರಿಫಾಅಗೆ ಏನೂ ತಿಳಿದಿರಲಿಲ್ಲ. ಬನೂ ಉದ್ರಾದ ಮಾರ್ಗದರ್ಶಕನು ಹಝ್ರತ್ ಝೈದ್ ಬಿನ್ ಹಾರಿಸಾ(ರ) ಮತ್ತು ಅವರ ಸಂಗಡಿಗರನ್ನು ಬೆಳಿಗ್ಗೆ ಹುನೈದ್, ಅವರ ಮಗ ಮತ್ತು ಅವರ ಜನರ ನಿವಾಸಗಳಿಗೆ ತಲಿಪಿಸಿದನು. ಸಹಾಬಗಳು ಈ ಜನರ ಮೇಲೆ ದಾಳಿ ಮಾಡಿ ಅವರನ್ನು ವಧಿಸಿದರು, ಇದರಿಂದಾಗಿ ಬಹಳಷ್ಟು ರಕ್ತಪಾತವಾಯಿತು ಮತ್ತು ಹುನೈದ್ ಮತ್ತು ಅವನ ಮಗನನ್ನು ವಧಿಸಿದರು. ಅವರ ಪ್ರಾಣಿಗಳು ಮತ್ತು ಅವರು ಒಂಟೆಗಳನ್ನು ಮತ್ತು ಮಹಿಳೆಯರನ್ನು ಸ್ವಾಧೀನಪಡಿಸಿಕೊಂಡರು. ಒಂದು ಸಾವಿರ ಒಂಟೆಗಳು ಮತ್ತು ಐದು ಸಾವಿರ ಮೇಕೆಗಳು ಇದ್ದವು. ಅವರು ಮಹಿಳೆಯರು ಮತ್ತು ಮಕ್ಕಳಲ್ಲಿ ನೂರು ಜನರನ್ನು ಸೆರೆಹಿಡಿದರು.

(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-6, ಪುಟ-88, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್) (ಫರ್ಹಾಂಗ್ ಸೀರತ್, ಪುಟ-243, 101, ಜವಾರ್ ಅಕಾಡೆಮಿ, ಕರಾಚಿ)

ಈ ದಾಳಿಯ ನಂತರ, ಜುಝಾಮ್ ಗೋತ್ರದ ಒಂದು ಶಾಖೆಯಾದ ಬನೂ ದುಬೈಬ್ ಮದೀನಾಗೆ ಬಂದ ಬಗ್ಗೆ ಉಲ್ಲೇಖವಿದೆ. "ಝೈದ್ ಮದೀನಕ್ಕೆ ಇನ್ನೂ ಬಂದಿರಲಿಲ್ಲ, ಆಗ ಬನು ಜುಝಾಮ್ ಗೋತ್ರದ ಒಂದು ಶಾಖೆಯಾದ ಬನು ದುಬೈಬ್ ಗೋತ್ರದ ಜನರು ಝೈದ್‌ನ ದಂಡಯಾತ್ರೆಯ ಬಗ್ಗೆ ತಿಳಿದುಕೊಂಡು, ಅವರ ಮುಖ್ಯಸ್ಥ ರಿಫಾಅ ಬಿನ್ ಝೈದ್ ಜೊತೆಗೂಡಿ, ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು, "ಯಾ ರಸೂಲಲ್ಲಾಹ್(ಸ)!! ನಾವು ಮುಸ್ಲಿಮರಾಗಿದ್ದೇವೆ ಮತ್ತು ನಮ್ಮ ದೇಶದ ಉಳಿದ ಭಾಗಗಳಿಗೂ ಶಾಂತಿಯ ಒಪ್ಪಂದವನ್ನು ಬರೆಯಲಾಗಿದೆ." ಮುಸ್ಲಿಮರಾಗದವರಿಗೂ ಶಾಂತಿಯ ಒಪ್ಪಂದ ಬರೆಯಲಾಗಿದೆ, ಆದರೆ ನೀವು ಕಳುಹಿಸಿದ ಸೈನ್ಯವು ದಾಳಿ ಮಾಡಿ ಅವರಲ್ಲಿ ಕೆಲವರನ್ನು ವಧಿಸಿ, ಕೆಲವು ಜನರನ್ನು ಸೆರೆಹಿಡಿದು, ಲೂಟಿ ಮಾಡಿತು, ಮತ್ತು ನಾವು ಮುಸ್ಲಿಮರಾಗಿದ್ದೇವೆ ಮತ್ತು ಅವರಿಗೂ ಶಾಂತಿಯ ಒಪ್ಪಂದವು ಬರೆಯಲಾಗಿದೆ. "ಹಾಗಾದರೆ ಈ ದಾಳಿಯಲ್ಲಿ ನಮ್ಮ ಗೋತ್ರದ ಜನರನ್ನು ಏಕೆ ಸೇರಿಸಲಾಗಿದೆ?" "ಅವರು ನಮ್ಮ ಮೇಲೆ ಏಕೆ ದಾಳಿ ಮಾಡಿದರು?" ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು ಹೌದು ಇದು ಸರಿಯಗಿದೆ. ನೀವು ಅದಕ್ಕೆ ಯಾವುದೇ ಪುರಾವೆಗಳನ್ನು ನೀಡಲಿಲ್ಲ. ಅವರು ಹೇಳಿದರು, "ನೀವು ಹೇಳಿದ್ದು ಸರಿ." ಆದರೆ ಝೈದ್‌ಗೆ ಇದರ ಬಗ್ಗೆ ತಿಳಿದಿರಲಿಲ್ಲ, ಮತ್ತು ನಂತರ ಆ ಸಂದರ್ಭದಲ್ಲಿ ಕೊಲ್ಲಲ್ಪಟ್ಟ ಜನರಿಗಾಗಿ ಅವರು(ಸ) ಪದೇ ಪದೇ ವಿಷಾದ ವ್ಯಕ್ತಪಡಿಸಿದರು. ಆಗ ರಿಫಾಅ ಅವರ ಒಡನಾಡಿ ಅಬು ಝೈದ್ ಹೇಳಿದರು, ಯಾ ರಸೂಲಲ್ಲಾಹ್(ಸ)!! ಕೊಲ್ಲಲ್ಪಟ್ಟವರ ಬಗ್ಗೆ ನಮಗೆ ಯಾವುದೇ ಬೇಡಿಕೆಗಳಿಲ್ಲ. ಇದು ತಪ್ಪು ತಿಳುವಳಿಕೆಯಿಂದ ಆದ ಆಕಸ್ಮಿಕ ಘಟನೆಯಾಗಿದೆ, ಆದರೆ ನಾವು ಜೀವಂತವಾಗಿರುವ ಜನರನ್ನು ಮತ್ತು ಝೈದ್ ನಮ್ಮ ಬುಡಕಟ್ಟು ಜನಾಂಗದಿಂದ ವಶಪಡಿಸಿಕೊಂಡ ಉಪಕರಣಗಳನ್ನು ನೀಡಬೇಕು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: "ಹೌದು, ಅದು ಸಂಪೂರ್ಣವಾಗಿ ಸರಿ." ಮತ್ತು ಆ ಸಾವಿರಾರು ಕುರಿಗಳು, ಒಂಟೆಗಳು, ಸರಕುಗಳು ಇತ್ಯಾದಿಗಳು ಸಹ ಕೈದಿಗಳಾಗಿದ್ದವು. ಅವರು ತಕ್ಷಣ ಹಝ್ರತ್ ಅಲಿ(ರ) ಅವರನ್ನು ಝೈದ್ ಬಳಿಗೆ ಕಳುಹಿಸಿದರು ಮತ್ತು ಅವರಿಗೆ ತಮ್ಮ ಕತ್ತಿಯನ್ನು ಸಂಕೇತವಾಗಿ ನೀಡಿದರು ಮತ್ತು ಸೆರೆಹಿಡಿಯಲಾದ ಈ ಗೋತ್ರದ ಕೈದಿಗಳು ಮತ್ತು ಸಂಪತ್ತನ್ನು ಬಿಡುಗಡೆ ಮಾಡುವಂತೆ ಝೈದ್‌ಗೆ ಸಂದೇಶವನ್ನು ಕಳುಹಿಸಿದರು. ಈ ಆದೇಶವನ್ನು ಸ್ವೀಕರಿಸಿದ ಕೂಡಲೇ, ಝೈದ್ ಎಲ್ಲಾ ಕೈದಿಗಳನ್ನು ಬಿಡುಗಡೆ ಮಾಡಿ ಸ್ವಾಧೀನಪಡೆದ ಎಲ್ಲಾ ಸರಕು ಸಾಮಾನುಗಳನ್ನು ಹಿಂದಿರುಗಿಸಿದರು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ (ರ.ಅ) ಎಂ.ಎ, ಪುಟಗಳು 681-682) ಅಸಂಖ್ಯಾತ ಸಂಪತ್ತು ಇತ್ತು.

ಯುದ್ಧ ಸಂಪತ್ತನ್ನು ಸಂಗ್ರಹಿಸಲು ಅವರು ದಾಳಿ ನಡೆಸುತ್ತಿದ್ದರು ಎಂದು ಆರೋಪಿಸಲಾಗುತ್ತದೆ. ಇಸ್ಲಾಂ ಸ್ಥಾಪಿಸಲು ಬಯಸುವ ಮಾನದಂಡವನ್ನು ವಿವರಿಸುವ ಒಂದು ಉದಾಹರಣೆ ಇದಾಗಿದೆ. ಇಂದಿಗೂ ಸಹ, ಮುಸ್ಲಿಮರು ದ್ವೇಷದ ಕಾರಣದಿಂದ ಪರಸ್ಪರ ಕೊಲ್ಲುತ್ತಿರುತ್ತಾರೆ. ಆದರೆ ಇಲ್ಲಿ ಕೇವಲ ಒಪ್ಪಂದ ಮಾಡಿಕೊಂಡಿದ್ದರಿಂದ ಅವರೊಂದಿಗೆ ಇಷ್ಟು ಉತ್ತಮವಾಗಿ ವರ್ತಿಸುತ್ತಿದ್ದಾರೆ.

ನಂತರ, ಝೈದ್ ಬಿನ್ ಹಾರಿಸಾ(ರ) ರವರ ಮತ್ತೊಂದು ಕಾರ್ಯಾಚರಣೆಯನ್ನು ಸಹ ಉಲ್ಲೇಖಿಸಲಾಗಿದೆ. ಈ ಕಾರ್ಯಚರಣೆಯು ರಜಬ್ 6 ಹಿಜ್ರಿನಲ್ಲಿ ವಾದಿ ಅಲ್-ಕುರಾದಲ್ಲಿ ನಡೆಯಿತು. (ಶಾರ್ಹ್ ಅಲ್-ಜರ್ಕಾನಿ, ಸಂಪುಟ-3, ಪುಟ-133, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್) ಇದು ಹಿಸ್ಮಾ ಕಾರ್ಯಚರಣೆಯ ಸುಮಾರು ಒಂದು ತಿಂಗಳ ನಂತರ ನಡೆಯಿತು, ಮತ್ತು ಹಝ್ರತ್ ಪೈಗಂಬರ್(ಸ) ಮತ್ತೆ ಝೈದ್ ಬಿನ್ ಹಾರಿಸಾ ಅವರನ್ನು ವಾದಿ ಅಲ್-ಕುರಾ ಕಡೆಗೆ ಕಳುಹಿಸಿದರು.

ವಾದಿ ಅಲ್-ಕುರಾದ ಬಗ್ಗೆ ಬರೆಯಲಾಗಿದೆ, ಇದು ಮದೀನಾದ ಉತ್ತರಕ್ಕೆ, ಸಿರಿಯಾದ ಕಡೆಗೆ, ಸುಮಾರು ಮುನ್ನೂರ ಐವತ್ತು ಕಿಲೋಮೀಟರ್ ದೂರದಲ್ಲಿದೆ. (ಮು'ಜಮ್ ಅಲ್-ಮಾ'ಅಲಮ್ ಅಲ್-ಜಘ್ರಫಿಯಾ ಫಿ ಅಲ್-ಸೀರತ್ ಅಲ್-ನಬವಿಯಾ, ಪುಟ-250. ಪ್ರಕಟಣೆ ಮತ್ತು ವಿತರಣೆಗಾಗಿ ದಾರುನ್ನಶರ್ ಮಕ್ಕಾ, 1982) ಒಂದು ವರದಿಯ ಪ್ರಕಾರ: ಮಝ್‌ಹಿಜ್ ಮತ್ತು ಖಿಝಾಅ ಗೋತ್ರದ ಜನರು ಈ ಸ್ಥಳದಲ್ಲಿ ಒಟ್ಟುಗೂಡಿದರು. ಮತ್ತು ಮುಝೂರ್ ಗೋತ್ರದ ಕೆಲವು ಕುಟುಂಬಗಳು ಅಲ್ಲಿ ಒಟ್ಟುಗೂಡಿದರು ಎಂದೂ ಸಹ ಹೇಳಲಾಗುತ್ತದೆ, ಆದರೆ ಯಾವುದೇ ರೀತಿಯ ಹೋರಾಟ ನಡೆಯಲಿಲ್ಲ.

(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-6, ಪುಟ-93, ದಾರುಲ್ ಕುತುಬ್ ಅಲ್-ಇಲ್ಮಿಯ, ಬೈರುತ್)

ಆದರೆ ಇಬ್ನ್ ಹಿಶಾಮ್ ಹೇಳುತ್ತಾರೆ: ಸಹಾಬಗಳು(ರ) ವಾದಿ ಅಲ್-ಕುರಾದಲ್ಲಿ ಬನು ಫುಜಾರಾ ಜೊತೆ ಹೋರಾಡಿದರು ಮತ್ತು ಅನೇಕ ಸಹಾಬಗಳು ಹುತಾತ್ಮರಾದರು ಮತ್ತು ಝೈದ್ ಕೂಡ ಗಂಭೀರವಾಗಿ ಗಾಯಗೊಂಡರು. (ಅಸ್ಸೀರತುನ್ನಬವೀಯ ಲಿಇಬ್ನ್ ಹಿಶಾಮ್, ಪುಟ-875, ದಾರುಲ್ ಕುತುಬ್ ಅಲ್-ಇಲ್ಮಿಯಾ, ಬೈರುತ್) ಆದರೆ ಸರ್ವಶಕ್ತನಾದ ಅಲ್ಲಾಹನು ಅವರನ್ನು ರಕ್ಷಿಸಿದನು ಮತ್ತು ಸೀರತ್ ಖಾತಮ್ ಅಲ್-ನಬಿಯ್ಯಿನ್(ಸ) ನಲ್ಲಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸಹ ಇಲ್ಲಿ ಯುದ್ಧ ನಡೆಯಿತು ಎಂದು ಬರೆದಿದ್ದಾರೆ.

ಅದರ ನಂತರ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರ ಕಾರ್ಯಾಚರಣೆಯ ಪ್ರಸ್ತಾಪವಿದೆ. ಈ ಕಾರ್ಯಾಚರಣೆ ಹಿಜರೀ 6, ಶಅ್‌ಬಾನ್ ತಿಂಗಳಲ್ಲಿ ದೂಮತುಲ್ ಜಂದಲ್ ಕಡೆಗೆ ಆಗಿತ್ತು. ಮದೀನಾದಿಂದ ಸುಮಾರು 450 ಕಿಲೋಮೀಟರ್ ದೂರದಲ್ಲಿರುವ ಮದೀನಾದ ಉತ್ತರಕ್ಕೆ ಸಿರಿಯಾದ ಗಡಿಗೆ ದೂಮತುಲ್ ಜಂದಲ್ ಅತ್ಯಂತ ಹತ್ತಿರದ ಸ್ಥಳವಾಗಿತ್ತು. ( ದಾ ಇರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ-7, ಪುಟ-

249)

ಇಬ್ನ್ ಇಸ್‌ಹಾಕ್ ಮತ್ತು ಮುಹಮ್ಮದ್ ಬಿನ್ ಉಮರ್ ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ಬಿನ್ ಅಲ್-ಖತ್ತಾಬ್(ರ.ಅ) ಅವರಿಂದ ವರದಿ ಮಾಡಿದ್ದಾರೆ, ಹಝ್ರತ್ ಪೈಗಂಬರ್(ಸ.ಅ)ರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ.ಅ) ಅವರನ್ನು ಕರೆದು ಹೇಳಿದರು: "ನೀವು ಸಿದ್ಧರಾಗಿರಿ, ಇನ್‌ಶಾಅಲ್ಲಾಹ್ ಇಂದು ಅಥವಾ ನಾಳೆ ನಾನು ನಿಮ್ಮನ್ನು ಒಂದು ಕಾರ್ಯಚರಣೆಗೆ ಕಳುಹಿಸುತ್ತೇನೆ." (ದಾಎರಾ ಮಆರಿಫ್ ಸೀರತ್ ಮುಹಮ್ಮದ್(ಸ), ಸಂಪುಟ-6, ಪುಟ-93, ದಾರುಲ್ ಕುತುಬ್ ಇಲ್ಮಿಯ, ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ಇದನ್ನು ಹೀಗೆ ವಿವರಿಸಿರುವರು: ಈ ಸರಿಯ್ಯದ ತಯಾರಿ ಮತ್ತು ಹೊರಡುವಿಕೆಯ ಕುರಿತು ಅಬ್ದುಲ್ಲಾಹ್ ಬಿನ್ ಉಮರ್(ರ)ರಿಂದ ಇಬ್ನು ಇಸ್‌ಹಾಖ್ ಒಂದು ಸ್ವಾರಸ್ಯಕರ ಘಟನೆಯನ್ನು ವರದಿ ಮಾಡಿರುವರು. ಅಬ್ದುಲ್ಲಾಹ್ ಬಿನ್ ಉಮರ್(ರ) ಹೇಳುತ್ತಾರೆ: ಒಮ್ಮೆ ನಾವೆಲ್ಲರೂ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಕುಳಿತುಕೊಂಡಿದ್ದೆವು. ಸಭೆಯಲ್ಲಿ ಹಝ್ರತ್ ಅಬೂಬಕರ್(ರ), ಉಮರ್(ರ), ಉಸ್ಮಾನ್(ರ), ಅಲಿ(ರ) ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್(ರ) ಸಹ ಇದ್ದರು. ಆಗ ಒಬ್ಬ ಅನ್ಸಾರಿ ಯುವಕ ಬಂದು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಕೇಳಿದ: ಯಾ ರಸೂಲಲ್ಲಾಹ್, ಸತ್ಯವಿಶ್ವಾಸಿಗಳಲ್ಲಿ ಅತ್ಯಂತ ಶ್ರೇಷ್ಠರು ಯಾರು? ತನ್ನ ಸ್ವಭಾವದಲ್ಲಿ ಅತ್ಯಂತ ಶ್ರೇಷ್ಠನಾದವನೇ ಅತ್ಯಂತ ಶ್ರೇಷ್ಠ ಎಂದು ಹಝ್ರತ್ ಪೈಗಂಬರ್(ಸ) ಉತ್ತರಿಸಿದರು.

ಈ ಸಂದರ್ಭದಲ್ಲಿ, ಸಾಮಾನ್ಯ ವಿಷಯಗಳು ಸಹ ನಡೆಯುತ್ತಿದ್ದವು. ಸರಿಯಾಗಳ ಉಲ್ಲೇಖವಿದೆ, ಯುದ್ಧಗಳ ಉಲ್ಲೇಖವಿದೆ, ಆದರೆ ಈ ಸಮಯದಲ್ಲಿ ನಮಗೂ ಬಹಳ ಮುಖ್ಯವಾದ ಕೆಲವು ಸಲಹೆಗಳು ಸಹ ಬಂದಿವೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನೈತಿಕತೆಯಲ್ಲಿ ಶ್ರೇಷ್ಠನಾದವನೇ ಶ್ರೇಷ್ಠನು. ಆತನು ಕೇಳಿದನು: ಯಾ ರಸೂಲಲ್ಲಾಹ್, ಅತ್ಯಂತ ಮುತ್ತಖೀ ಯಾರು? ಹಝ್ರತ್ ಪೈಗಂಬರ್(ಸ) ಹೀಗೆ ಉತ್ತರಿಸಿದರು: ಮರಣವನ್ನು ಹೆಚ್ಚಾಗಿ ನೆನಪಿಸುವವನು ಮತ್ತು ಅದಕ್ಕಾಗಿ ಸಮಯಕ್ಕೆ ಮುಂಚಿತವಾಗಿ ತಯಾರಿ ಮಾಡುವವನು. ಅಲ್ಲಾಹನ ಭಯವಿರಿಸಿಕೊಳ್ಳುವುದು, ಅವನಿಗೆ ಸಲ್ಲಬೇಕಾದ ಕರ್ತವ್ಯವನ್ನು ನಿರ್ವಹಿಸುವುದು, ಅವನ ಆದೇಶಗಳನ್ನು ಪಾಲಿಸುವುದೇ ಮರಣದ ತಯಾರಿಯಾಗಿದೆ. ಆಗ ಆ ಅನ್ಸಾರಿ ಯುವಕ ಸುಮ್ಮನಾದನು. ಹಝ್ರತ್ ಪೈಗಂಬರ್(ಸ) ನಮ್ಮೆಡೆಗೆ ನೋಡಿಕೊಂಡು ಹೀಗೆ ಹೇಳಿದರು: ಎಲೈ ಮುಹಾಜಿರರ ಸಮೂಹವೇ, ನಂತರ ಅವರು ಕೆಲವು ಸಲಹೆಗಳನ್ನು ನೀಡಿದರು:

"ಐದು ಕೆಡುಕುಗಳು ಎಂತಹದ್ದು ಎಂದರೆ, ಅವು ನನ್ನ ಸಮುದಾಯದಲ್ಲಿ ಉಂಟಾಗದಿರಲು ನಾನು ಅಲ್ಲಾಹನ ಅಭಯವನ್ನು ಯಾಚಿಸುತ್ತೇನೆ. ಏಕೆಂದರೆ ಅವು ಸಮುದಾಯವನ್ನು ನಾಶಮಾಡುತ್ತವೆ."

ಒಂದು, ಯಾವುದೇ ಸಮುದಾಯದಲ್ಲಿ ಅಶ್ಲೀಲ ಕೃತ್ಯಗಳು ಮಿತಿಮೀರಿ ಅವುಗಳನ್ನು ಬಹಿರಂಗವಾಗಿ ಮಾಡಲು ತೊಡಗಿಕೊಂಡರೆ ಅದರ ಕಾರಣದಿಂದ ಹಿಂದಿನ ಜನರಲ್ಲಿ ಇರದಿದ್ದ ಕಾಯಿಲೆಗಳು ಮತ್ತು ಸಾಂಕ್ರಾಮಿಕ ರೋಗಗಳು ಉಂಟಾಗಲು ತೊಡಗುವುದು. ಅಂತಹ ಸಮುದಾಯ ನಾಶವಾಗದೇ ಇರದು.

ಇಂದು ಲೋಕದಲ್ಲಿ ಇದು ಸರ್ವ ಸಾಧಾರಣವಾಗಿ ಕಾಣಬಹುದಾಗಿದೆ. ಹಝ್ರತ್ ಪೈಗಂಬರ್(ಸ) ಇದರಿಂದ ಅಭಯ ಯಾಚಿಸಿದ್ದರು. ಮುಸ್ಲಿಮರು ಇದರ ಬಗ್ಗೆ ವಿಶೇಷ ಗಮನಹರಿಸಬೇಕಾಗಿದೆ.

ಎರಡು, ಯಾವುದೇ ಸಮುದಾಯದಲ್ಲಿ ಅಳತೆ ಮತ್ತು ತೂಕದಲ್ಲಿ ಮೋಸಗಾರಿಕೆ ಮಾಡುವ ಕೆಡುಕು ಉಂಟಾದರೆ ಅಂತಹ ಸಮುದಾಯದಲ್ಲಿ ಬರಗಾಲ, ಅತಿಯಾದ ಕಷ್ಟತೆ ಮತ್ತು ಅಧಿಕಾರಿಯ ದೌರ್ಜನ್ಯದ ವಿಪತ್ತು ಬಂದೆರೆಗದೇ ಇರಲು ಸಾಧ್ಯವಲ್ಲ.

ಇದರ ಬಗ್ಗೆಯೂ ಬಹಳ ಗಮನಹರಿಸಬೇಕಾಗಿದೆ. ಮುಸ್ಲಿಮರಲ್ಲೂ ಬಹಳ ಹೆಚ್ಚಾಗಿ ಮೋಸಗಾರಿಕೆ ಉಂಟಾಗಿದೆ. ಅವರು ಇದನ್ನು ತಿಳಿದುಕೊಂಡರೆ ಎಷ್ಟು ಚೆನ್ನಾಗಿತ್ತು. ಅಹ್ಮದಿಯರು ಕೂಡ ವಿಶೇಷವಾಗಿ ಈ ಬಗ್ಗೆ ಗಮನಹರಿಸಬೇಕಾಗಿದೆ.

ಮೂರು, ಯಾವುದಾದರೂ ಸಮುದಾಯದಲ್ಲಿ ಝಕಾತ್ ಮತ್ತು ದಾನಧರ್ಮಗಳನ್ನು ಮಾಡುವುದರಲ್ಲಿ ಆಲಸ್ಯ ಮತ್ತು ಅಸಡ್ಡೆ ಉಂಟಾದರೆ ಅಂತಹ ಸಮುದಾಯದಲ್ಲಿ ಮಳೆಯ ಕೊರತೆ ಉಂಟಾಗದೇ ಇರದು. ಎಲ್ಲಿಯ ವರೆಗೆ ಎಂದರೆ, ಅಲ್ಲಾಹನಿಗೆ ತಾನು ಸೃಷ್ಟಿಸಿದ ಜಾನುವಾರುಗಳು ಬಗ್ಗೆ ಚಿಂತೆ ಇಲ್ಲದೆ ಇರುತ್ತಿದ್ದರೆ ಅಂತಹ ಸಮುದಾಯದಲ್ಲಿ ಮಳೆ ಬರುವುದು ಪೂರ್ಣವಾಗಿಯೂ ಸ್ಥಗಿತಗೊಳ್ಳುವುದು.

ಇದು ಕೂಡ ಅಲ್ಲಾಹನ ಶಿಕ್ಷೆಯ ಕುರುಹು ಆಗಿದೆ. ಇದರಿಂದಲೂ ಅಭಯ ಯಾಚಿಸಬೇಕು. ನೀವು ಅಭಯ ಯಾಚಿಸಿರಿ, ನಾನು ಸಹ ಅಭಯ ಯಾಚಿಸುತ್ತೇನೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವರು.

ನಾಲ್ಕು, ಯಾವುದಾದರೂ ಸಮುದಾಯ ಅಲ್ಲಾಹನು ಮತ್ತು ಅವನ ಪ್ರವಾದಿಯೊಂದಿಗೆ ಮಾಡಿರುವ ಪ್ರತಿಜ್ಞೆಯನ್ನು ಮುರಿದರೆ ಅಂತಹ ಸಮುದಾಯದ ಮೇಲೆ ಅವರ ಶತ್ರುಗಳಾದ ಅನ್ಯ ಸಮುದಾಯದವರು ಆಳ್ವಿಕೆ ಮಾಡುವರು ಮತ್ತು ಅವರ ಹಕ್ಕುಗಳನ್ನು ಕಸಿದುಕೊಳ್ಳುವರು.

ಇಂದಿನ ಮುಸ್ಲಿಮರ ಅವಸ್ಥೆಯಿಂದ ಗೊತ್ತಾಗುವುದೇನೆಂದರೆ, ಅವರು ತನ್ನ ಪ್ರತಿಜ್ಞೆಯನ್ನು ಮುರಿದಿರುವರು ಎಂದಾಗಿದೆ. ಅಲ್ಲಾಹನು ಕೃಪೆದೋರಲಿ ಮತ್ತು ಅವರಿಗೆ ವಿವೇಕ ನೀಡಲಿ.

ಐದು, ಎಂದಾದರೂ ಯಾವುದೇ ಸಮುದಾಯದ ಪಂಡಿತರು ಮತ್ತು ನೇತಾರರು ಶರೀಅತಿನ ವಿರುದ್ಧವಾದ ತೀರ್ಪುಗಳನ್ನು ನೀಡಿಕೊಂಡು ಶರೀಅತನ್ನು ತಮ್ಮ ಇಷ್ಟಾನುಸಾರ ಬದಲಾಯಿಸಿದರೆ ಅಂತಹ ಸಮುದಾಯದ ಒಳಗೆ ಜಗಳ ಮತ್ತು ಬಿರುಕಿನ ಪರಂಪರೆ ಆರಂಭವಾಗುವುದು.

ಈಗ ಮುಸ್ಲಿಮರಲ್ಲಿ ಪಕ್ಷಗಾರಿಕೆ ಸರ್ವಸಾಧಾರಣವಾಗಿ ಕಂಡುಬರುತ್ತಿದೆ. ಯಾವ ಸಂಗತಿಗಳಿಂದ ಹಝ್ರತ್ ಪೈಗಂಬರ್(ಸ) ಅಭಯ ಯಾಚಿಸಿದ್ದರೋ ಅದೇ ಇಂದು ಮುಸ್ಲಿಮರಲ್ಲಿ ನಾವು ಕಾಣುತ್ತಿದ್ದೇವೆ. ಅಲ್ಲಾಹನು ಕೃಪೆದೋರಲಿ.

"ಹಝ್ರತ್ ಪೈಗಂಬರ್(ಸ)ರ ಈ ಸುವರ್ಣ ಮಾತುಗಳು ಸಮುದಾಯಗಳ ಅಭಿವೃದ್ಧಿ ಮತ್ತು ಅವನತಿಯ ಕಾರಣಗಳ ಅತ್ಯುತ್ತಮ ವಿವರಣೆಯಾಗಿದೆ. ಇಂದು ಮುಸ್ಲಿಮರು ಬಯಸುವುದಾದರೆ ಅವರಿಗೆ ಈಗಿನ ಕಾಲದಲ್ಲೂ ಈ ಮಾತುಗಳು ಅತ್ಯುತ್ತಮ ಪಾಠವಾಗಿದೆ." (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-713-714)

ಮುಸ್ಲಿಮರು ಇದರ ಬಗ್ಗೆ ಚಿಂತಿಸಿದ್ದರೆ ಎಷ್ಟು ಚೆನ್ನಾಗಿತ್ತು!

ಕಾರ್ಯಚರಣೆಯ ಪರಿಸ್ಥಿತಿ ಮತ್ತು ಘಟನೆಗಳ ಕುರಿತು ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ.ಅ) ವರದಿ ಮಾಡುತ್ತಾರೆ, ಹಝ್ರತ್ ಪೈಗಂಬರ್(ಸ)ರು ಅಬ್ದುರ್ ರಹ್ಮಾನ್ ಬಿನ್ ಔಫ್(ರ.ಅ) ಅವರಿಗೆ ರಾತ್ರಿಯಲ್ಲಿ ದೂಮತುಲ್ ಜಂದಲ್‌ಗೆ ಹೊರಡಲು ಆದೇಶಿಸಿದರು. ಅವರ ಸೈನ್ಯವು ಜುರ್ಫನಲ್ಲಿ ಬೀಡುಬಿಟ್ಟಿತ್ತು ಮತ್ತು ಅದರಲ್ಲಿ ಏಳುನೂರು ಜನರಿದ್ದರು. ಜುರ್ಫ ಬಗ್ಗೆ ಬರೆಯಲಾಗಿದೆ, ಅದು ಮದೀನಾದಿಂದ ಮೂರು ಮೈಲಿ ಉತ್ತರಕ್ಕೆ ಒಂದು ಸ್ಥಳವಾಗಿತ್ತು.

(ಸಬ್ಲುಲ್ ಹುದಾ ಅಲ್-ರಿಷಾದ್, ಸಂಪುಟ-6, ಪುಟ-94, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್) (ಫರ್ಹಾಂಗ್ ಸೀರತ್, ಪುಟ-114, ಜವಾರ್ ಅಕಾಡೆಮಿ, ಕರಾಚಿ)

ಈ ಕಾರ್ಯಚರಣೆಯ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ.ಅ) ಅವರು ಬರೆದಿದ್ದಾರೆ, "ಈಗ ಇಸ್ಲಾಮಿನ ಪ್ರಭಾವದ ಕ್ಷೇತ್ರವು ವೇಗವಾಗಿ ವಿಸ್ತರಿಸುತ್ತಿತ್ತು ಮತ್ತು ಇಸ್ಲಾಂ ಧರ್ಮದ ಉಪದೇಶವು ಅರೇಬಿಯಾದ ದೂರದ ಮೂಲೆಗಳನ್ನು ಸಹ ತಲುಪುತ್ತಿತ್ತು, ಆದರೆ ಇದರೊಂದಿಗೆ, ದೂರದ ಪ್ರದೇಶಗಳಲ್ಲಿಯೂ ವಿರೋಧ ಹೆಚ್ಚುತ್ತಿತ್ತು ಮತ್ತು ಇಸ್ಲಾಂ ಕಡೆಗೆ ಒಲವು ತೋರಿದವರು ತಮ್ಮ ಸಹವರ್ತಿ ಗೋತ್ರದ ಜನಾಂಗದವರಿಂದ ತೀವ್ರ ಕಿರುಕುಳವನ್ನು ಸಹಿಸಬೇಕಾಯಿತು ಮತ್ತು ಈ ಕಿರುಕುಳಕ್ಕೆ ಹೆದರಿ, ಅನೇಕ ದುರ್ಬಲ ಮನಸ್ಸಿನ ಜನರು ಇಸ್ಲಾಂ ಧರ್ಮವನ್ನು ವ್ಯಕ್ತಪಡಿಸುವುದರಿಂದ ದೂರ ಉಳಿದಿದ್ದರು." ಆದ್ದರಿಂದ, ಯುದ್ಧ ಕಾರ್ಯಾಚರಣೆಗಳ ಉದ್ದೇಶವನ್ನು ಈಗ ಕೆಲವು ಜನರು ತಮ್ಮ ಹೃದಯದಲ್ಲಿ ಇಸ್ಲಾಂ ಧರ್ಮದತ್ತ ಒಲವು ತೋರುತ್ತಿದ್ದ ಆದರೆ ಕಿರುಕುಳದ ಭಯದಿಂದ ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಹಿಂಜರಿದ ಗೋತ್ರದ ಜನಾಂಗಗಳಿಗೆ ಯೋಧ ಪಡೆಗಳನ್ನು ಕಳುಹಿಸುವ ಉದ್ದೇಶಕ್ಕೆ ಸೇರಿಸಲಾಯಿತು. ಈ ಪಡೆಗಳನ್ನು ಕಳುಹಿಸುವ ಉದ್ದೇಶವು ಧಾರ್ಮಿಕ ಸ್ವಾತಂತ್ರ್ಯವನ್ನು ಸ್ಥಾಪಿಸುವುದಾಗಿತ್ತು, ಇದಕ್ಕೆ ಇಸ್ಲಾಂ ಧರ್ಮವು ವಿಶೇಷವಾಗಿ ಮಹತ್ವ ನೀಡುತ್ತದೆ. ಈ ಗುರಿಯನ್ನು ಮನಸ್ಸಿನಲ್ಲಿಟ್ಟುಕೊಂಡು, ಹಝ್ರತ್ ಪೈಗಂಬರ್(ಸ) ಅವರು ಹಿಜ್ರಿ 6 ರ ಶಅ್‌ಬಾನ್ ತಿಂಗಳಲ್ಲಿ ಅಬ್ದುರ್ ರಹಮಾನ್ ಬಿನ್ ಔಫ್(ರ) ರ ನೇತೃತ್ವದಲ್ಲಿ ಒಂದು ಸೇನಾ ಪಡೆಯನ್ನು ದೂಮತುಲ್ ಜಂದಲ್ ಎಂಬ ದೂರದ ಸ್ಥಳಕ್ಕೆ ಕಳುಹಿಸಿದರು... ಹಝ್ರತ್ ಪೈಗಂಬರ್(ಸ) ಅವರು ಸ್ವತಃ ಹಿಜ್ರಿ 4 ರ ವರ್ಷದಲ್ಲಿ ಶಾಂತಿಯನ್ನು ಸ್ಥಾಪಿಸುವ ಗುರಿಯೊಂದಿಗೆ ಇದೇ ಸ್ಥಳಕ್ಕೆ ಭೇಟಿ ನೀಡಿದ್ದರು, ಮತ್ತು ಹೀಗಾಗಿ ಈ ಪ್ರದೇಶವು ಎರಡು ವರ್ಷಗಳ ಹಿಂದೆ ಇಸ್ಲಾಮಿನ ಪ್ರಭಾವದ ಕ್ಷೇತ್ರವನ್ನು ಪ್ರವೇಶಿಸಿತು. ಅಲ್ಲಿನ ನಿವಾಸಿಗಳು ಇಸ್ಲಾಮಿನ ಬೋಧನೆಗಳ ಪರಿಚಯವಿಲ್ಲದವರಾಗಿರಲಿಲ್ಲ, ಆದರೆ ಬಹುಶಃ ಅವರಲ್ಲಿ ಕೆಲವರು ಇಸ್ಲಾಂ ಧರ್ಮದ ಕಡೆಗೆ ಒಲವು ತೋರುತ್ತಿದ್ದರು, ಆದರೆ ಅವರ ನಾಯಕರು ಮತ್ತು ಗೋತ್ರದ ಜನಾಂಗದವರ ವಿರೋಧದಿಂದಾಗಿ ಧೈರ್ಯ ಮಾಡಲು ಸಾಧ್ಯವಾಗಲಿಲ್ಲ. ಆದರೆ, 6ನೇ ಹಿಜ್ರಿಯಲ್ಲಿ, ಹಝ್ರತ್ ಪೈಗಂಬರ್(ಸ) ಅತ್ಯಂತ ಪ್ರಮುಖ ಸಹಾಬರಲ್ಲಿ ಒಬ್ಬರಾದ ಅಬ್ದುರ್ ರಹಮಾನ್ ಬಿನ್ ಔಫ್(ರ) ಅವರ ನೇತೃತ್ವದಲ್ಲಿ ಒಂದು ದೊಡ್ಡ ಸೈನ್ಯವನ್ನು ದೂಮತುಲ್-ಜಂದಲ್ ಕಡೆಗೆ ಕಳುಹಿಸಿದರು.

ಹಝ್ರತ್ ಪೈಗಂಬರ್(ಸ)ರು ತಮ್ಮ ಆಪ್ತ ಒಡನಾಡಿ ಅಬ್ದುರ್ ರಹಮಾನ್ ಬಿನ್ ಔಫ್(ರ) ಅವರನ್ನು ಉದ್ದೇಶಿಸಿ ಹೇಳಿದರು: "ಇಬ್ನ್

ಔಫ್! ನಾನು ನಿಮ್ಮನ್ನು ಒಂದು ಗುಂಪಿನ ನಾಯಕನನ್ನಾಗಿ ಕಳುಹಿಸಲು ಬಯಸುತ್ತೇನೆ, ಆದ್ದರಿಂದ ಸಿದ್ಧರಾಗಿರಿ." ಆದ್ದರಿಂದ ಮರುದಿನ ಬೆಳಿಗ್ಗೆ, ಅಬ್ದುರ್ ರಹಮಾನ್ ಬಿನ್ ಔಫ್(ರ) ಹಝ್ರತ್ ಪೈಗಂಬರ್(ಸ) ರವರ ಸನ್ನಿಧಿಯಲ್ಲಿ ಹಾಜರಾದರು, ಮತ್ತು ಹಝ್ರತ್ ಪೈಗಂಬರ್(ಸ) ಅವರ ಪೇಟವನ್ನು ತೆಗೆದುಕೊಂಡು ಅದನ್ನು ತಮ್ಮ ಕೈಯಿಂದ ತಮ್ಮ ತಲೆಯ ಮೇಲೆ ಕಟ್ಟಿಕೊಂಡರು ಮತ್ತು ಬಿಲಾಲ್(ರ) ಅವರಿಗೆ ಒಂದು ಧ್ವಜವನ್ನು ಹಸ್ತಾಂತರಿಸಲು ಆದೇಶಿಸಿದರು. ನಂತರ ಅವರು ಹಝ್ರತ್ ಅಬ್ದುರ್ ರಹಮಾನ್ ಬಿನ್ ಔಫ್(ರ) ಅವರ ನೇತೃತ್ವದಲ್ಲಿ ಸಹಾಬಗಳ ಒಂದು ಗುಂಪನ್ನು ನೇಮಿಸಿದರು ಮತ್ತು ಅವರಿಗೆ ಹೇಳಿದರು:

"ಓ ಇಬ್ನ್ ಔಫ್! ಈ ಧ್ವಜವನ್ನು ತೆಗೆದುಕೊಂಡು ನೀವೆಲ್ಲರೂ ದೇವರ ಮಾರ್ಗದಲ್ಲಿ ಜಿಹಾದ್‌ಗಾಗಿ ಹೊರಟು ಅವಿಶ್ವಾಸಿಗಳ ವಿರುದ್ಧ ಹೋರಾಡಿ, ಆದರೆ ಯಾವುದೇ ವಿಶ್ವಾಸಘಾತುಕತನವನ್ನು ಮಾಡದಂತೆ, ಯಾವುದೇ ಒಪ್ಪಂದವನ್ನು ಮುರಿಯದಂತೆ, ಶತ್ರುಗಳ ಮೃತರ ದೇಹಗಳನ್ನು ವಿರೂಪಗೊಳಿಸದಂತೆ ಅಥವಾ ಮಕ್ಕಳನ್ನು ಕೊಲ್ಲದಂತೆ ಜಾಗರೂಕರಾಗಿರಿ. ಇದು ದೇವರ ಆಜ್ಞೆ ಮತ್ತು ಅವನ ಪ್ರವಾದಿಯ ಸುನ್ನತ್ ಆಗಿದೆ."

ಈ ವರದಿಯಲ್ಲಿ, ವರದಿಗಾರರು ಬಹುಶಃ ಮಹಿಳೆಯರ ಉಲ್ಲೇಖವನ್ನು ತಪ್ಪಾಗಿ ಬಿಟ್ಟುಬಿಟ್ಟಿರಬಹುದು, ಇಲ್ಲದಿದ್ದರೆ ಬೇರೆಡೆ ಸ್ಪಷ್ಟವಾಗಿ ಹೇಳಲಾಗಿದೆ, ಹಝ್ರತ್ ಪೈಗಂಬರ್(ಸ) ಒಂದು ಪಡೆಯನ್ನು ಕಳುಹಿಸಿದಾಗ, ಮಹಿಳೆಯರನ್ನು ಕೊಲ್ಲಬಾರದು, ವೃದ್ಧರನ್ನು ಕೊಲ್ಲಬಾರದು ಅಥವಾ ಧಾರ್ಮಿಕ ಸೇವೆಗೆ ಮೀಸಲಾಗಿರುವ ಜನರನ್ನು ಕೊಲ್ಲಬಾರದು ಎಂದು ಅವರು(ಸ) ಒತ್ತಿ ಹೇಳಿರುವರು.

ಅದಾದ ನಂತರ, ಹಝ್ರತ್ ಪೈಗಂಬರ್(ಸ) ಹಝ್ರತ್ ಅಬ್ದುರ್ ರಹಮಾನ್ ಬಿನ್ ಔಫ್(ರ) ಅವರಿಗೆ ದೂಮತುಲ್ ಜಂದಲ್‌ಗೆ ಹೋಗಿ ಶಾಂತಿಯುತ ಇತ್ಯರ್ಥಕ್ಕೆ ಪ್ರಯತ್ನಿಸಲು ಸೂಚಿಸಿದರು, ಏಕೆಂದರೆ ಆ ಜನರು ಯುದ್ಧ ಮತ್ತು ಜಗಳವನ್ನು ತ್ಯಜಿಸಿದರೆ ಇದು ಉತ್ತಮ. ಹಝ್ರತ್ ಪೈಗಂಬರ್(ಸ) ಔಫ್(ರ) ಅವರಿಗೆ ಹೇಳಿದರು: ಅವರು ಸ್ವೀಕರಿಸಿದರೆ "ನೀವು ಈ ಜನರ ಮುಖ್ಯಸ್ಥರ ಮಗಳನ್ನು ಮದುವೆಯಾಗುವುದು ಸೂಕ್ತ. ಅದಾದ ನಂತರ, ಹಝ್ರತ್ ಪೈಗಂಬರ್(ಸ) ಗುಂಪನ್ನು ಬೀಳ್ಕೊಟ್ಟರು. ಮತ್ತು ಹಝ್ರತ್ ಅಬ್ದುರ್ ರಹಮಾನ್ ಬಿನ್ ಔಫ್(ರ.ಅ) ಅವರು ಏಳುನೂರು ಸಹಾಬರನ್ನು ಕರೆದುಕೊಂಡು, ಅರೇಬಿಯಾದ ಉತ್ತರದಲ್ಲಿ, ತಬೂಕ್‌ನ ಈಶಾನ್ಯದಲ್ಲಿ, ಸಿರಿಯಾದ ಗಡಿಯ ಬಳಿ ಇರುವ ದೂಮತುಲ್ ಜಂದಲ್‌ಗೆ ಹೊರಟರು. ಈ ಇಸ್ಲಾಮಿಕ್ ಸೈನ್ಯವು ದೂಮಗೆ ತಲುಪಿದಾಗ, ಮೊದಲಿಗೆ ದೂಮಾದ ಜನರು ಯುದ್ಧಕ್ಕೆ ಸಿದ್ಧರೆಂದು ತೋರುತ್ತಿದ್ದರು ಮತ್ತು ಮುಸ್ಲಿಮರನ್ನು ಕತ್ತಿಯಿಂದ ಬೆದರಿಸಿದರು, ಆದರೆ ಕ್ರಮೇಣ, ಅಬ್ದುರ್ ರಹಮಾನ್ ಬಿನ್ ಔಫ್(ರ) ಅವರ ಮನವೊಲಿಕೆಯಿಂದ ಅವರು ತಮ್ಮ ಮನಸ್ಸನ್ನು ಬದಲಾಯಿಸಿದರು ಮತ್ತು ಕೆಲವು ದಿನಗಳ ನಂತರ, ಕ್ರಿಶ್ಚಿಯನ್ ಆಗಿದ್ದ ಅವರ ಮುಖ್ಯಸ್ಥ **ಅಸ್ಬಾಗ್ ಬಿನ್ ಉಮರ್ ಕಲ್ಬಿ,** ಅಬ್ದುರ್ ರಹಮಾನ್ ಬಿನ್ ಔಫ್(ರ) ಅವರ ಉಪದೇಶದ ಮೂಲಕ ಸ್ವಇಚ್ಛೆಯಿಂದ ಇಸ್ಲಾಂ ಅನ್ನು ಸ್ವೀಕರಿಸಿದರು. ಅವರೊಂದಿಗೆ, ಬಹುಶಃ ಈಗಾಗಲೇ ಹೃದಯದಲ್ಲಿ ಇಸ್ಲಾಂ ಕಡೆಗೆ ಒಲವು ತೋರಿದ್ದ ಅವರ ಜನರಿಂದ ಅನೇಕ ಜನರು ಮುಸ್ಲಿಮರಾದರು, ಮತ್ತು ತಮ್ಮ ಧರ್ಮದಲ್ಲಿ ದೃಢವಾಗಿ ಉಳಿದವರು ಸಹ ನಾಯಕನ ನಾಯಕತ್ವದಲ್ಲಿ ಇಸ್ಲಾಮಿಕ್ ಸರ್ಕಾರದ ಅಡಿಯಲ್ಲಿ ಬರಲು ಒಪ್ಪಿಕೊಂಡರು. "ಯಾರನ್ನೂ ಮತಾಂತರಿಸಲು ಒತ್ತಾಯಿಸಲಾಗಿಲ್ಲ." ಸ್ವೀಕರಿಸದ ಅನೇಕ ಜನರಿದ್ದರು. ಆದರೆ ಅವರು ಸರ್ಕಾರವನ್ನು ಪಾಲಿಸುವುದಾಗಿ ಪ್ರತಿಜ್ಞೆ ಮಾಡಿದರು.

ಹೀಗೆ, ಕಾರ್ಯಾಚರಣೆಯು ಬಹಳ ಯಶಸ್ವಿಯಾಗಿ ಕೊನೆಗೊಂಡಿತು ಮತ್ತು ಹಝ್ರತ್ ಪೈಗಂಬರ್(ಸ) ರವರ ಸೂಚನೆಗಳ ಪ್ರಕಾರ, ಅಬ್ದುರ್ ರಹಮಾನ್ ಬಿನ್ ಔಫ್(ರ) ದೂಮತುಲ್-ಜಂದಲ್‌ನ ಮುಖ್ಯಸ್ಥ ಅಸ್ಬಾಗ್ ಬಿನ್ ಉಮರ್ ಅವರ ಪುತ್ರಿ ತುಮಾಝಿರ್ ಅವರನ್ನು ವಿವಾಹವಾದರು ಮತ್ತು ಮದೀನಕ್ಕೆ ಮರಳಿದರು. ಅಲ್ಲಾಹನ ಅನುಗ್ರಹದಿಂದ ಮತ್ತು ಹಝ್ರತ್ ಪೈಗಂಬರ್(ಸ) ರ ಗಮನದಿಂದ, ತುಮಾಝಿರ್ ಅವರ ಗರ್ಭದಿಂದ ಅಬ್ದುರ್ ರಹಮಾನ್ ಬಿನ್ ಔಫ್ ಅವರಿಗೆ ಒಂದು ಗಂಡು ಮಗು ಜನಿಸಿತು, ಅವರು ಇಸ್ಲಾಂ ಧರ್ಮದ ವಿಶೇಷ ಭಕ್ತರಿಂದ ಹೊರಹೊಮ್ಮಿದರು ಮತ್ತು ಅವರ ಕಾಲದಲ್ಲಿ ಇಸ್ಲಾಂ ಧರ್ಮದ ಉನ್ನತ ವಿದ್ವಾಂಸರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟರು. ಅವನ ಹೆಸರು ಅಬು ಸಲ್ಮಾ ಝುಹ್ರಿ."

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ಎಂ.ಎ), ಪುಟಗಳು 713 ರಿಂದ 716)

ಇಬ್ನ್ ಸಅದ್ ಅಬು ಸಲ್ಮಾ ಅಲ್-ಜುಹ್ರಿಯ ಬಗ್ಗೆ ಬರೆದಿದ್ದಾರೆ, **ಕಾನ ಸಖತನ್ ಫಖೀಹನ್ ಕಸೀರಲ್ ಹದೀಸಿ** ಅಂದರೆ: ಅವರು ಅನೇಕ ಹದೀಸ್‌ಗಳನ್ನು ಹೊಂದಿರುವ ವಿಶ್ವಾಸಾರ್ಹ ನ್ಯಾಯಶಾಸ್ತ್ರಜ್ಞರಾಗಿದ್ದರು.

ಸಯೀದ್ ಬಿನ್ ಅಲ್-ಆಸ್ ಬಿನ್ ಉಮಯ್ಯ ಮೊದಲ ಬಾರಿಗೆ ಮುಆವಿಯಾ ಬಿನ್ ಅಬಿ ಸುಫ್ಯಾನ್ ಪರವಾಗಿ ಮದೀನಾದ ಗವರ್ನರ್ ಆದಾಗ, ಅವರು ಅಬು ಸಲ್ಮಾ ಅವರನ್ನು ಮದೀನಾದ ನ್ಯಾಯಾಧೀಶರನ್ನಾಗಿ ನೇಮಿಸಿದರು. ಅಬು ಸಲ್ಮಾ(ರ) 72 ವರ್ಷ ವಯಸ್ಸಿನವರಾಗಿದ್ದರು ಮತ್ತು ಹಿಜರಿ 94 ರಲ್ಲಿ ನಿಧನರಾದರು.

(ತಬಖಾತುಲ್ ಕುಬ್ರ, ಸಂಪುಟ-5, ಪುಟಗಳು-118, 120, ದಾರುಲ್ ಕುತುಬ್ ಇಲ್ಮಿಯಾ, ಬೈರುತ್)

ಅನಂತರ ಸರಿಯ್ಯ ಹಝ್ರತ್ ಅಲಿ ಬಿನ್ ಅಬೀ ತಾಲಿಬ್(ರ) ಆಗಿದೆ. ಈ ಕಾರ್ಯಾಚರಣೆ ಫಿದಕಿನ ಕಡೆಗೆ ಆಗಿತ್ತು. ಈ ಸರಿಯ್ಯ ಹಿಜರೀ 6, ಶುಅಬಾನ್ ಮಾಸದಲ್ಲಿ ನಡೆದಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರನ್ನು ನೂರು ಜನರೊಂದಿಗೆ ಫಿದಕಿಗೆ ಬನೂ ಸಅದ್ ಬಿನ್ ಬಕರ್ ಗೋತ್ರದ ಕಡೆಗೆ ಕಳುಹಿಸಿದರು. ಫಿದಕ್ ಬಗ್ಗೆ ಬರೆಯಲಾಗಿದೆ, ಅದು ಖೈಬರ್ ಬಳಿಯ ಪಟ್ಟಣ, ಮದೀನಾದಿಂದ ಆರು ರಾತ್ರಿಗಳ ಪ್ರಯಾಣದ ದೂರದಲ್ಲಿದೆ. ಹಿಜರಿ 7 ರ ಖೈಬರ್ ಯುದ್ಧದ ಸಮಯದಲ್ಲಿ ಈ ಪ್ರದೇಶವನ್ನು ಯಾವುದೇ ಹೋರಾಟವಿಲ್ಲದೆ ಜಯಿಸಲಾಗಿತ್ತು. ಈಗ ಅದು ತಾಳೆ ಮರಗಳು ಮತ್ತು ಕೃಷಿಯಿಂದ ಸಮೃದ್ಧವಾಗಿರುವ ದೊಡ್ಡ ನಗರವಾಗಿದೆ. ಇಂದು ಅದನ್ನು ಅಲ್‌ಹಾಯಿತ್ ಎಂದು ಕರೆಯಲಾಗುತ್ತದೆ. ಹಝ್ರತ್ ಪೈಗಂಬರ್(ಸ) ಅವರಿಗೆ ಅವರು ಸೈನ್ಯವನ್ನು ಒಟ್ಟುಗೂಡಿಸಿದ್ದಾರೆ, ಈ ಜನರು, ಶತ್ರುಗಳು, ಮತ್ತು ಅವರು ಖೈಬರ್‌ನ ಯಹೂದಿಗಳಿಗೆ ಸಹಾಯ ಮಾಡಲು ಬಯಸುತ್ತಾರೆ ಎಂದು ತಿಳಿಸಲಾಯಿತು. ಹಝ್ರತ್ ಅಲಿ(ರ.ಅ) ರಾತ್ರಿ ವೇಳೆ ಪ್ರಯಾಣಿಸುತ್ತಿದ್ದರು ಮತ್ತು ಹಗಲಿನಲ್ಲಿ ಅಡಗಿಕೊಳ್ಳುತ್ತಿದ್ದರು.

(ಸಬ್ ಅಲ್-ಹುದಾ ಅಲ್-ರಿಶಾದ್, ಸಂಪುಟ-6, ಪುಟ-97, ದಾರುಲ್ ಕುತುಬ್ ಇಲ್ಮಿಯಾ, ಬೈರುತ್) (ಫರ್ಹಂಗ್ ಸೀರತ್, ಪುಟ-298, ಜವಾರ್ ಅಕಾಡೆಮಿ, ಕರಾಚಿ) (ಮುಜಮುಲ್ ಮುಆಲಿಮ್ ಅಲ್‌ಜಗ್ರಾಫಿಯಾ ಫಿಸ್ಸೀರತುನ್ನಬವಿಯಾ, ಪುಟ-235. ಮಕ್ಕಾ ಪಬ್ಲಿಷಿಂಗ್ ಹೌಸ್, 1982)

ಅದನ್ನು ವಿವರವಾಗಿ, ಸೀರತ್ ಖಾತಮನ್ನಬಿಯೀನ್(ಸ) ನಲ್ಲಿ ಬರೆಯಲಾಗಿದೆ: "ಮದೀನಾದಲ್ಲಿ ಯಹೂದಿ ಜನರು ತಮ್ಮದೇ ಆದ ವಿಶ್ವಾಸಘಾತುಕತನ ಮತ್ತು ದೇಶದ್ರೋಹಕ್ಕೆ ಪ್ರಚೋದನೆಯಿಂದ ಸಂಭವಿಸಿದ ವಿನಾಶವು ಎಲ್ಲಾ ಅರೇಬಿಯಾದ ಯಹೂದಿಗಳ ಹೃದಯಗಳಲ್ಲಿ ಮುಳ್ಳಾಗಿತ್ತು, ಮತ್ತು ಬನು ಖುರೈಝಾ ಕದನದ ನಂತರ, ಮದೀನಾದಲ್ಲಿ ಯಹೂದಿಗಳನ್ನು ನಿರ್ಮೂಲನೆ ಮಾಡಿದಾಗ, ಹಿಜಾಝ್‌ನ ಯಹೂದಿಗಳ ಅತಿದೊಡ್ಡ ಕೇಂದ್ರವಾಗಿದ್ದ ಖೈಬರ್ ಪಟ್ಟಣವು ಇಸ್ಲಾಂ ವಿರುದ್ಧದ ರಹಸ್ಯ ಪಿತೂರಿಗಳಿಗೆ ನೆಲೆಯಾಯಿತು ಮತ್ತು ಸಾಮಾನ್ಯವಾಗಿ ಬಹಳ ದ್ವೇಷಪೂರಿತ, ಅಸೂಯೆ ಮತ್ತು ಕ್ರೂರರಾಗಿದ್ದ ಆ ಸ್ಥಳದ ಯಹೂದಿಗಳು ಇಸ್ಲಾಂ ಅನ್ನು ನಿರ್ಮೂಲನೆ ಮಾಡಲು ಮತ್ತು ಮುಸ್ಲಿಮರನ್ನು ನಿರ್ಮೂಲನೆ ಮಾಡಲು ಸಕ್ರಿಯರಾಗಿದ್ದರು.

ಶಅಬಾನ್ 6 ಹಿಜ್ರಿಯಲ್ಲಿ, ಹಝ್ರತ್ ಪೈಗಂಬರ್(ಸ) ಅವರಿಗೆ ಬನು ಸಅದ್ ಬಿನ್ ಬಕ್ರ್ ಗೋತ್ರ ಮತ್ತು ಖೈಬರ್‌ನ ಯಹೂದಿಗಳು ಮುಸ್ಲಿಮರ ವಿರುದ್ಧ ಪಿಸುಗುಟ್ಟುತ್ತಿದ್ದಾರೆ ಮತ್ತು ಬನು ಸಅದ್ ಖೈಬರ್ ಜನರಿಗೆ ಬೆಂಬಲವಾಗಿ ತಮ್ಮ ಪಡೆಗಳನ್ನು ಸಂಗ್ರಹಿಸುತ್ತಿದ್ದಾರೆ ಎಂಬ ಮಾಹಿತಿ ಲಭಿಸಿತು. ಈ ಮಾಹಿತಿ ತಿಳಿದ ನಂತರ, ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ) ರವರ ನೇತೃತ್ವದಲ್ಲಿ ಸಹಾಬಗಳ ತುಕಡಿಯನ್ನು ಕಳುಹಿಸಿದರು. ಅವರು ಹಗಲಿನಲ್ಲಿ ಅಡಗಿಕೊಂಡು ರಾತ್ರಿಯಲ್ಲಿ ಪ್ರಯಾಣಿಸುತ್ತಾ, ಈ ಜನರು ಸೇರುತ್ತಿದ್ದ ಫಿದಕ್ ಬಳಿ ತಲುಪಿದರು. ಇಲ್ಲಿ ಮುಸ್ಲಿಮರು ಬನು ಸಅದ್‌ಗಾಗಿ ಗೂಢಚಾರನಾಗಿದ್ದ ಓರ್ವ ಅನಾಗರೀಕನನ್ನು ಕಂಡುಕೊಂಡರು. ಹಝ್ರತ್ ಅಲಿ(ರ.ಅ) ಅವನನ್ನು ಬಂಧಿಸಿ ಜೈಲಿಗೆ ಹಾಕಿದರು ಮತ್ತು ಬನು ಸಅದ್ ಮತ್ತು ಖೈಬರ್ ಜನರ ಸ್ಥಿತಿಗತಿಗಳ ಬಗ್ಗೆ ಅವನ ಬಳಿ ವಿಚಾರಿಸಿದರು. ಮೊದಲಿಗೆ, ಅವನು ಸಂಪೂರ್ಣ ಅಜ್ಞಾನ ಮತ್ತು ಉದಾಸೀನತೆಯನ್ನು ವ್ಯಕ್ತಪಡಿಸಿದನು, ಆದರೆ ಅಂತಿಮವಾಗಿ, ಕ್ಷಮೆಯ ಭರವಸೆಯನ್ನು ಪಡೆದ ನಂತರ, ಅವನು ಸಂಪೂರ್ಣ ರಹಸ್ಯವನ್ನು ಬಹಿರಂಗಪಡಿಸಿದನು. ನಂತರ, ಮುಸ್ಲಿಮರು, ಈ ವ್ಯಕ್ತಿಯನ್ನು ತಮ್ಮ ಮಾರ್ಗದರ್ಶಕನನ್ನಾಗಿ ಬಳಸಿಕೊಂಡು, ಬನು ಸಅದ್ ಸೇರುತ್ತಿದ್ದ ಸ್ಥಳದ ಕಡೆಗೆ ಮುನ್ನಡೆದರು ಮತ್ತು ಇದ್ದಕ್ಕಿದ್ದಂತೆ ದಾಳಿ ಮಾಡಿದರು. ಈ ಹಠಾತ್ ದಾಳಿಯಿಂದಾಗಿ, ಬನು ಸಅದ್ ಭಯಭೀತರಾಗಿ ಯುದ್ಧಭೂಮಿಯಿಂದ ಓಡಿಹೋದರು, ಮತ್ತು ಹಝ್ರತ್ ಅಲಿ(ರ.ಅ) ಯುದ್ಧ ಸಂಪತ್ತಿನೊಂದಿಗೆ ಮದೀನಾಗೆ ಮರಳಿದರು, ಮತ್ತು ಹೀಗಾಗಿ ಅಪಾಯವು ತಾತ್ಕಾಲಿಕವಾಗಿ ತಪ್ಪಿತು.

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ.ಅ) ಎಂ.ಎ. ಪುಟ-716)

ಅನಂತರ ಸರಿಯ್ಯ ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪವಿದೆ. ಅದು ಬನೂ ಫಝಾರ ಗೋತ್ರದ ಕಡೆಗೆ ಆಗಿತ್ತು. ಈ ಸರಿಯ್ಯ ಹಿಜರೀ

6ರಲ್ಲಿ ನಡೆದಿತ್ತು. ಬನೂ ಫಝಾರಾ ಗೋತ್ರವು ನಜದಿನಲ್ಲಿ ಅಲ್‌ಖಿರಾ ಕಣಿವೆಯಲ್ಲಿ ನೆಲೆಸಿತ್ತು. ಮತ್ತು ವಾದಿ ಅಲ್-ಖಿರಾ ಮದೀನಾದಿಂದ ಸಿರಿಯಾದ ಕಡೆಗೆ ಸುಮಾರು ಮುನ್ನೂರ ಐವತ್ತು ಕಿಲೋಮೀಟರ್ ಉತ್ತರದಲ್ಲಿದೆ.

(ಮು'ಜಮ್ ಅಲ್-ಮಾ'ಅಲಮ್ ಅಲ್-ಜಘ್ರಫಿಯಾ ಫಿ ಅಲ್-ಸಿರಾತ್ ಅಲ್-ನಬವಿಯಾ, ಪುಟ-250. ಪ್ರಕಟಣೆ ಮತ್ತು ವಿತರಣೆಗಾಗಿ ದಾರ್ ಮಕ್ಕಾ, 1982) (ಫರ್ಹಾಂಗ್ ಅಲ್-ಸೀತ್, ಪುಟ-300, ಜವಾರ್ ಅಕಾಡೆಮಿ ಕರಾಚಿ)

ಈ ಯುದ್ಧ ತುಕಡಿಯನ್ನು ಹಝ್ರತ್ ಝೈದ್ ಬಿನ್ ಹಾರಿಸ(ರ.ಅ) ರವರ ನೇತೃತ್ವದಲ್ಲಿ ಕಳುಹಿಸಲಾಗಿತ್ತು ಎಂದು ತಬಕಾತುಲ್ ಕುಬ್ರ ಮತ್ತು ಸೀರತ್ ಇಬ್ನ್ ಹಿಶಾಮ್ ನಲ್ಲಿ ಬರೆಯಲಾಗಿದೆ. (ಅತ್ತಬಖಾತುಲ್ ಕುಬ್ರ, ಭಾಗ-2, ಪುಟ-69, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಇಬ್ನ್ ಹಿಶಾಮ್, ಪುಟ-875, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್) ಆದರೆ ಇದು ಸಹೀಹ್ ಮುಸ್ಲಿಂ ಮತ್ತು ಸುನನ್ ಅಬು ದಾವೂದ್ ಅವರಿಂದ ತಿಳಿದುಬಂದಿದೆ. ಹಝ್ರತ್ ಪೈಗಂಬರ್(ಸ)ರು ಹಝ್ರತ್ ಅಬೂಬಕರ್(ರ) ಅವರನ್ನು ಈ ಕುಲದ ನಾಯಕರನ್ನಾಗಿ ನೇಮಿಸಿದರು ಎಂದು ಹೇಳಲಾಗುತ್ತದೆ. ಸಹೀಹ್ ಮುಸ್ಲಿಮ್‌ನಲ್ಲಿ ಹೀಗೆ ವರದಿಯಾಗಿದೆ: ಇಯಾಸ್ ಬಿನ್ ಸಲ್ಮಾ ವರದಿ ಮಾಡುತ್ತಾರೆ: ನನ್ನ ತಂದೆ ಹಝ್ರತ್ ಸಲಾಮ ಬಿನ್ ಅಕ್ವಾ(ರ) ಹೇಳುತ್ತಾರೆ: ನಾವು ಫಜಾರಾ ಗೋತ್ರದ ವಿರುದ್ಧ ಹೋರಾಡಿದೆವು ಮತ್ತು ನಮ್ಮ ನಾಯಕ ಹಝ್ರತ್ ಅಬೂಬಕರ್(ರ.ಅ) ಆಗಿದ್ದರು. ಹಝ್ರತ್ ಪೈಗಂಬರ್(ಸ)ರು ಹಝ್ರತ್ ಅಬೂಬಕರ್(ರ) ಅವರನ್ನು ನಮ್ಮ ಅಮೀರರನ್ನಾಗಿ ಮಾಡಿದ್ದಾರೆ. ನಮಗೂ ನೀರಿಗೂ, ಅಲ್ಲಿನ ಬಾವಿಗೂ ಅಥವಾ ಯಾವುದೇ ನೀರಿನ ಮೂಲಕ್ಕೂ ಒಂದು ಗಂಟೆಯ ಅಂತರವಿದ್ದಾಗ, ಹಝ್ರತ್ ಅಬೂಬಕರ್(ರ.ಅ) ಆದೇಶ ನೀಡಿದರು ಮತ್ತು ನಾವು ರಾತ್ರಿಯ ಕೊನೆಯ ಜಾವದಲ್ಲಿ ಡೇರೆ ಹೂಡಿದೆವು. ಅಲ್ಲಿ ನೀರಿನ ಒಂದು ಗಂಟೆ ಮೊದಲು ನಾವು ಅಲ್ಲಿ ಶಿಬಿರ ಹೂಡಿದೆವು. ನಂತರ ನಾವು ಮತ್ತು ಅವರು ನೀರನ್ನು ತಲುಪಿದಾಗ ಅವರು, ಅಂದರೆ ಹಝ್ರತ್ ಅಬೂಬಕರ್(ರ.ಅ) ಎಲ್ಲಾ ಕಡೆಯಿಂದಲೂ ದಾಳಿ ಮಾಡಿ ಸಾಧ್ಯವಾದವರನ್ನು ಕೊಂದು ಅವರನ್ನು ಸೆರೆಹಿಡಿದರು. ಮಕ್ಕಳು ಮತ್ತು ಮಹಿಳೆಯರು ಸೇರಿದಂತೆ ಜನರ ಗುಂಪನ್ನು ನಾನು ನೋಡಿದೆ. ಅವರು ನನಗಿಂತ ಮೊದಲು ಪರ್ವತ ಹತ್ತುತ್ತಾರೆ ಎಂದು ನಾನು ಹೆದರುತ್ತಿದ್ದೆ. ಅವರ ಜೊತೆಗಿದ್ದ ಸಹಾಬಗಳು ಈ ಜನರು ಆತುರದಿಂದ ಪರ್ವತ ಹತ್ತಿ ಕಣ್ಮರೆಯಾಗುತ್ತಾರೆ ಎಂದು ಭಯಪಡುತ್ತಿದ್ದರು ಎಂದು ಹೇಳಿದರು. ಅವರು ಹೇಳುತ್ತಾರೆ, ನಾನು ಅವರ ಪರ್ವತದ ನಡುವೆ ಬಾಣ ಬಿಟ್ಟೆ, ಅವರು ಭಯದಿಂದ ಹಿಂದೆ ಉಳಿಯಲು ಬಾಣಗಳನ್ನು ಹೊಡೆಯಲು ಪ್ರಾರಂಭಿಸಿದರು. ಅವರು ಬಾಣವನ್ನು ನೋಡಿದಾಗ, ಅವರು ನಿಂತುಕೊಂಡರು. ನಾನು ಅವರನ್ನು ಅಟ್ಟಾಡಿಸಿಕೊಂಡು ಕರೆತಂದೆ. ಅವರಲ್ಲಿ ಹಳೆಯ ತುಪ್ಪಳ ಕೋಟ್ ಧರಿಸಿದ ಬನು ಫುಝಾರಾ ಮೂಲದ ಒಬ್ಬ ಮಹಿಳೆ ಇದ್ದಳು ಮತ್ತು ಅವಳೊಂದಿಗೆ ತುಂಬಾ ಸುಂದರವಾಗಿದ್ದ ಅವಳ ಪುತ್ರಿ ಇದ್ದಳು. ನಾನು ಅವರನ್ನು ಹಝ್ರತ್ ಅಬೂಬಕರ್(ರ.ಅ) ರವರ ಬಳಿಗೆ ಕರೆತರುವವರೆಗೂ ಅವರನ್ನು ಸುತ್ತುವರೆದಿದ್ದೆ. ಹಝ್ರತ್ ಅಬೂಬಕರ್(ರ.ಅ) ಆಕೆಯ ಪುತ್ರಿಯನ್ನು ನನಗೆ ಉಡುಗೊರೆಯಾಗಿ ನೀಡಿದರು. ನಾವು ಮದೀನಾಗೆ ಬಂದೆವು. ಹಝ್ರತ್ ಪೈಗಂಬರ್(ಸ)ರು ಈ ಹುಡುಗಿಯನ್ನು ಕರೆದುಕೊಂಡು ಹೋಗಿ ಮಕ್ಕಾದ ಜನರ ಬಳಿಗೆ ಕಳುಹಿಸಿದರು. ಹಝ್ರತ್ ಅಬೂಬಕರ್(ರ) ಆಕೆಯನ್ನು ಅವರಿಗೆ ನೀಡಿದ್ದರು, ಆದರೆ ಹಝ್ರತ್ ಪೈಗಂಬರ್(ಸ)ರು ಆಕೆಯನ್ನು ಪಡೆದು ಕೊಂಡು ಮೆಕ್ಕಾಗೆ ಕಳುಹಿಸಿದರು, ಮತ್ತು ಅದಕ್ಕೆ ಪ್ರತಿಯಾಗಿ ಮೆಕ್ಕಾದ ಸೆರೆಯಲ್ಲಿದ್ದ ಅನೇಕ ಮುಸ್ಲಿಮರನ್ನು ಬಿಡುಗಡೆ ಮಾಡಲು ಅವರು ಆಕೆಯನ್ನು ಕಳುಹಿಸಿದರು. ಇದು ಸಹೀಹ್ ಮುಸ್ಲಿಂನ ವರದಿಯಾಗಿದೆ.

(ಸಹೀಹ್ ಮುಸ್ಲಿಂ ಕಿತಾಬುಲ್ ಜಿಹಾದ್, ಹದೀಸ್-4573)

ಈ ಕಾರ್ಯಾಚರಣೆಯಲ್ಲಿ ಮುಸ್ಲಿಮರ ಧ್ಯೇಯವಾಕ್ಯ **"ಅಮಿತ್ ಅಮಿತ್"** ಎಂದಾಗಿತ್ತು. ಹಝ್ರತ್ ಸಲ್ಮಾ ಬಿನ್ ಅಕ್ವಾ(ರ) ಹೇಳುತ್ತಾರೆ, ಆ ದಿನ ನಾನು ನನ್ನ ಕೈಯಿಂದಲೇ ಏಳು ಜನರನ್ನು ವಧಿಸಿದೆ. ಒಂದು ವರದಿಯ ಪ್ರಕಾರ, ಅವರು ಒಂಬತ್ತು ಜನರನ್ನು ವಧಿಸಿದರು. (ಸಬ್ ಅಲ್-ಹುದಾ ಅಲ್-ರಶೀದ್, ಸಂಪುಟ-6, ಪುಟ-92, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್) ಉಳಿದ ವಿಚಷಯ ಮುಂದೆ ವಿವರಿಸಲಾಗುವುದು, ಇನ್‌ಶಾಅಲ್ಲಾಹ್.

ಈ ಸಮಯದಲ್ಲಿ, ನಾನು ಮೃತರಲ್ಲಿ ಕೆಲವರನ್ನು ಉಲ್ಲೇಖಿಸಲು ಬಯಸುತ್ತೇನೆ. ಅವರಲ್ಲಿ ಮೊದಲ ಪ್ರಸ್ತಾಪ ಖಾದಿಯಾನಿನ ದರ್‌ವೇಶ್ ಆಗಿದ್ದ ಸನ್ಮಾನ್ಯ ತಯ್ಯಿಬ್ ಅಹ್ಮದ್ ಬಂಗಾಳಿ ಸಾಹಿಬ್‌ರದ್ದಾಗಿದೆ. ದಿವಂಗತರು ಡಿಸೆಂಬರ್ 11ರಂದು ತೊಂಬತ್ತೇಳನೇ ವಯಸ್ಸಿನಲ್ಲಿ ನಿಧನಗೊಂಡರು – **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಜನನ ಬಂಗ್ಲಾದೇಶದಲ್ಲಿ ಆಗಿತ್ತು. 1942ರಲ್ಲಿ ಅವರಿಗೆ ಡಾಕದಲ್ಲಿ ಬೈಅತ್ ಫಾರಮ್ ಭರ್ತಿ ಮಾಡಿಕೊಂಡು ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸಲು ಸೌಭಾಗ್ಯ ಲಭಿಸಿತ್ತು. 1945ರಲ್ಲಿ ಮೊದಲ ಬಾರಿ ಖಾದಿಯಾನಿನ ಜಲ್ಸ ಸಾಲಾನದಲ್ಲಿ ಭಾಗವಹಿಸಿದರು ಮತ್ತು ಅವರಿಗೆ ಹಝ್ರತ್ ಮುಸ್ಲಿಹ್ ಮೌಊದ್(ರ)ರನ್ನು ಭೇಟಿಯಾಗುವ ಸೌಭಾಗ್ಯ ಲಭಿಸಿತು. ಖಾದಿಯಾನಿನೊಂದಿಗೆ ಅವರ ಹೃದಯದಲ್ಲಿ ಎಷ್ಟು ಪ್ರೀತಿ ಉಂಟಾಗಿತ್ತು ಎಂದರೆ ಅನಂತರ ತನ್ನ ಸ್ವದೇಶಕ್ಕೆ ಅವರು ಮರಳಿ ಹೋಗಲಿಲ್ಲ. ಗ್ರಾಮೀಣ ಮುಬಲ್ಲಿಗರಿಗಾಗಿ ಇರುವ ವಿಶೇಷ ಕ್ಲಾಸಿನಲ್ಲಿ ಅವರು ಎರಡು ವರ್ಷ ಕಲಿತರು. ಈ ನಡುವೆ 1947ರಲ್ಲಿ ಭಾರತ ವಿಭಜನೆಯ ಘಟನೆ ನಡೆಯಿತು. ಆಗ ಖಾದಿಯಾನಿನಲ್ಲೇ ನೆಲೆಸಬೇಕು ಎಂಬ ಅವರ ಅರ್ಜಿಯನ್ನು ಮಂಜೂರು ಮಾಡಲಾಯಿತು.

ದರ್‌ವೇಶಿನ ಕಾಲದಲ್ಲಿ ಅನೇಕ ಸ್ಥಳಗಳಲ್ಲಿ ಭದ್ರತೆಯ ಕರ್ತವ್ಯವನ್ನು (ಸೆಕ್ಯೂರಿಟಿ ಡ್ಯೂಟಿ) ನಿರ್ವಹಿಸಲು ಅವರಿಗೆ ಸೌಭಾಗ್ಯ ಲಭಿಸಿತ್ತು. ಸದರ್ ಅಂಜುಮನ್ ಅಹ್ಮದಿಯಾದ ಅನೇಕ ಆಫೀಸುಗಳಲ್ಲಿ ವಿವಿಧ ಸೇವೆಗಳನ್ನು ಮಾಡಲು ಅವರಿಗೆ ಸೌಭಾಗ್ಯ ಲಭಿಸಿತ್ತು. 1955, 1956ರಲ್ಲಿ ಜಮಾಅತಿಗೆ ಆರ್ಥಿಕ ಕೊರತೆಯಿತ್ತು. ದರ್‌ವೇಶ್‌ಗಳು ಏನಾದರೂ ನೌಕರಿ ಮಾಡಿಕೊಂಡು ಆದಾಯ ಉಂಟುಮಾಡಬಹುದಾಗಿದೆ ಮತ್ತು ಅವರು ಸ್ವತಃ ಯಾವುದಾದರೂ ಕೆಲಸವನ್ನು ಹುಡುಕಬೇಕಾಗಿದೆ ಏಕೆಂದರೆ ಜಮಾಅತಿಗೆ ಅಲೌನ್ಸ್ ನೀಡಲು ಮತ್ತು ಅವರ ಆರ್ಥಿಕ ಭಾರವನ್ನು ಎತ್ತಲು ಈಗ ಸಾಧ್ಯವಲ್ಲವೆಂದು ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಘೋಷಿಸಿತು. ಈ ನಿರ್ದೇಶನದ ಬೆಳಕಿನಲ್ಲಿ ಅವರು ದಾರುಲ್ ಮಸೀಹಿನ ಹೊರಗೆ ಒಂದು ಚಹಾ ಅಂಗಡಿಯನ್ನು ತೆರೆದರು. ಅಲ್ಲಿ ಅವರು ಹೆಚ್ಚಾಗಿ ಅತಿಥಿಗಳಿಗೆ ಮತ್ತು ಬಡ ಜನರಿಗೆ ಉಚಿತವಾಗಿ ಚಹಾ ನೀಡುತ್ತಿದ್ದರು. ವಿವಾಹ ವಿಚ್ಛೇದಿತರಾದ ಕೇರಳದ ಒಬ್ಬರು ಮಹಿಳೆ ಆಮಿನ ಸಾಹಿಬರೊಡನೆ ಅವರ ವಿವಾಹ ಆಗಿತ್ತು. ಆಮಿನ ಸಾಹಿಬರಿಗೆ ಮೊದಲೇ ಒಬ್ಬಳು ಮಗಳಿದ್ದಳು. ಅವಳನ್ನು ತಯ್ಯಿಬ್ ಸಾಹಿಬ್‌ರು ಸಾಕಿ ಸಲಹಿದರು. ಕೆಲವು ವರ್ಷಗಳ ಹಿಂದೆ ಅವರಿಗೆ ತೀವ್ರ ಮೊಣಕಾಲು ನೋವಿತ್ತು. ಇದರಿಂದ ಅವರಿಗೆ ನಡೆದಾಡಲು ಕಷ್ಟವಾಗುತ್ತಿತ್ತು. ಆಪರೇಶನ್ ಮಾಡಬೇಕೆಂದು ವೈದ್ಯರು ಸಲಹೆ ನೀಡಿದರು. ಆದರೆ ಅವರು ಒಪ್ಪಲಿಲ್ಲ. ಅವರು ಬಹಳ ಮರುಕದಿಂದ ಮತ್ತು ಬಹಳ ಆರ್ದ್ರತೆ ಮತ್ತು ನೋವಿನಿಂದ ದುಆ ಮಾಡುತ್ತಿದ್ದರು. ಅವರು ಹೇಳುತ್ತಾರೆ: ಒಂದು ರಾತ್ರಿ ನಾನು ಕನಸಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕಂಡೆ. ಅವರು ಬಂದು ನನಗೆ ಬಿಹಿಶ್ತಿ ಮಖ್‌ಬರದ ಕೆಲವು ಗಿಡಮೂಲಿಕೆಗಳನ್ನು ತಿನ್ನಲು ಕೊಟ್ಟರು. ಅನಂತರ ಮೊಣಕಾಲಿನ ನೋವು ಮೆಲ್ಲ ಮೆಲ್ಲನೆ ಕೊನೆಗೊಂಡಿತು ಮತ್ತು ತನ್ನ ಅಭಿಲಾಷೆಯಂತೆ ಅವರು ಪುನಃ ನಿಯತವಾಗಿ ನಮಾಝಿಗಾಗಿ ಮಸ್ಜಿದ್ ಅಖ್ಸಾ ಮತ್ತು ಮಸ್ಜಿದ್ ಮುಬಾರಕಿಗೆ ಬರಲು ತೊಡಗಿದರು. ಅವರಿಗೆ ಖಿಲಾಫತಿನೊಂದಿಗೆ ಅಪರಿಮಿತ ಸಂಬಂಧ ಮತ್ತು ಪ್ರೀತಿಯಿತ್ತು. ಅವರಿಗೆ ಕ್ರೀಡಾಟದಲ್ಲಿ ಅಭಿರುಚಿಯಿತ್ತು. ಆದ್ದರಿಂದ ಯುವಕರಿಗೂ ಅವರೊಂದಿಗೆ ವಿಶೇಷ ಸಂಬಂಧವಿತ್ತು. ಆಟದ ಮೈದಾನಗಳಲ್ಲಿ ಯುವಕರನ್ನು ಹುರಿದುಂಬಿಸಲು ಬರುತ್ತಿದ್ದರು. ಈ ರೀತಿಯಾಗಿ ಯುವಕರ ಧಾರ್ಮಿಕ ತರಬೇತಿ ಕೂಡ ಆಗುತ್ತಿತ್ತು.

ಹಝ್ರತ್ ಮುಸ್ಲಿಹ್ ಮೌಊದ್(ರ)ರ ನಿರ್ದೇಶನ ಪ್ರಕಾರ ಭಾರತ ವಿಭಜನೆಯ ಸಮಯದಲ್ಲಿ 313 ದರವೇಶುಗಳು ಖಾದಿಯಾನಿನಲ್ಲಿ ನೆಲೆಸಿದ್ದರು. ನಿಧನಗೊಂಡ ದರ್‌ವೇಶ್‌ಗಳಲ್ಲಿ ಇವರು ಕೊನೆಯ ದರ್‌ವೇಶ್ ಆಗಿದ್ದರು. ಈಗ ಖಾದಿಯಾನಿನಲ್ಲಿ ಯಾರೂ ದರ್‌ವೇಶ್ ಉಳಿದಿಲ್ಲ. ಖಾದಿಯಾನಿನಲ್ಲಿ ಇಂದು ಆರಂಭಿಸಿದ್ದು ದರ್‌ವೇಶ್‌ಗಳಿಲ್ಲದ ಮೊದಲ ಜಲ್ಸ ಆಗಿದೆ. ತ್ಯಾಗಶೀಲರಾದ ಈ ಹಿರಿಯರ ರೂಢಿಗಳನ್ನು ನೆಲೆನಿಲ್ಲಿಸುತ್ತಾ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಖಾದಿಯಾನಿನಲ್ಲಿ ತಮ್ಮ ಜೀವಿತವನ್ನು ಸಾಗಿಸುವುದು ಖಾದಿಯಾನಿನಲ್ಲಿ ನೆಲೆಸಿರುವ ಹೊಸ ಪೀಳಿಗೆಯ ಕೆಲಸವಾಗಿದೆ. ಅಲ್ಲಾಹನು ಅವರಿಗೆ ಅದರ ಸೌಭಾಗ್ಯ ನೀಡಲಿ.

ಮುಂದಿನ ಉಲ್ಲೇಖವು ಸದರ್ ಅಂಜುಮನ್ ಅಹ್ಮದಿಯಾ ರಬ್ವಾ ಪಾಕಿಸ್ತಾನದ ಮಿರ್ಝಾ ಮುಹಮ್ಮದ್ದೀನ್ ನಾಝ್ ಸಾಹಿಬ್ ಅವರದ್ದಾಗಿದೆ. ಅವರು ಮಿರ್ಝಾ ಅಹ್ಮದ್ ದಿನ್ ಸಾಹಿಬ್ ಅವರ ಪುತ್ರ ಆಗಿದ್ದರು. ಅವರು ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**- ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆಯ ಮೂಲಕ ಪ್ರವೇಶಿಸಿತು, ಅವರು 1942 ರಲ್ಲಿ ಅಹ್ಮದಿ ಪಟ್ವಾರಿ ಹಶ್ಮತುಲ್ಲಾ ಸಾಹಿಬ್ ಅವರ ಧರ್ಮೋಪದೇಶದ ಮೂಲಕ ಅಹ್ಮದಿಯಾದರು. ಮುಹಮ್ಮದ್ದೀನ್ ಸಾಹಿಬ್ ಅವರು ಸೈಯದ್ ಅಬ್ದುಲ್ ಹಾದಿ ಸಾಹಿಬ್ ಅವರ ಪುತ್ರಿ ಸೈಯದಾ ನುಸ್ರತ್ ಜಹಾನ್ ಸಾಹಿಬ್ ಅವರನ್ನು ವಿವಾಹವಾದರು. ಅವರಿಗೆ ಒಬ್ಬ ಪುತ್ರನಿದ್ದನು, ಅವನು ಚಿಕ್ಕ ವಯಸ್ಸಿನಲ್ಲಿಯೇ ನಿಧನ ಹೊಂದಿದನು. ನಂತರ ಅವರು ಒಬ್ಬ ಸೋದರಳಿಯ ಮತ್ತು ಓರ್ವ ಸೊಸೆಯನ್ನು ದತ್ತು ತೆಗೆದುಕೊಂಡು ಮಕ್ಕಳಂತೆ ನೋಡಿಕೊಂಡರು. ಸೋದರಳಿಯ ಕೂಡ ಅನಾರೋಗ್ಯದಿಂದ ಬಳಲುತ್ತಿದ್ದಾನೆ,

ಸರ್ವಶಕ್ತನಾದ ಅಲ್ಲಾಹನು ಅವನನ್ನು ಗುಣಪಡಿಸಲಿ. 1965 ರಲ್ಲಿ ಅವರು ಜಾಮಿಯಾ ಅಹ್ಮದಿಯಾದಲ್ಲಿ ಸೇರಿದರು. ಅವರು ಬಿಎ ಪದವಿ ಪಡೆದರು. ಅವರು ಸ್ವಲ್ಪ ಕಾಲ ಹೊರಗೆ ಕೆಲಸ ಮಾಡಿದರು. ನಂತರ ಅವರು ಜಾಮಿಯಾವನ್ನು ಪ್ರವೇಶಿಸಿದರು ಮತ್ತು 1971 ರಲ್ಲಿ ಜಾಮಿಯಾದಲ್ಲಿ ಉತ್ತೀರ್ಣರಾದ ನಂತರ, ಅವರ ಮೊದಲ ನೇಮಕಾತಿ ಅಲ್ಲಿನ ಕ್ಷೇತ್ರದಲ್ಲಿತ್ತು. ನಂತರ ಅವರನ್ನು ಜಾಮಿಯಾದ ಶಿಕ್ಷಕರಾಗಿ ನೇಮಿಸಲಾಯಿತು. ಅವರು ಸರ್ಫ್ ವನಹು (ಅರೇಬಿಕ್ ವ್ಯಾಕರಣವನ್ನು) ಕಲಿಸುತ್ತಿದ್ದರು. ಅವರು ಸಾಹಿತ್ಯ, ನ್ಯಾಯಶಾಸ್ತ್ರ, ಇತಿಹಾಸ ಮತ್ತು ಸೂಫಿಸಂ ಅನ್ನು ಸಹ ಕಲಿಸಿದರು. ಜಾಮಿಯಾದಲ್ಲಿ ಉಪ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುವ ಸೌಭಾಗ್ಯವೂ ಅವರಿಗೆ ಲಭಿಸಿತು. ಮೂವತ್ತೇಳು ವರ್ಷಗಳ ಕಾಲ ಜಾಮಿಯಾದಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯ ಅವರಿಗೆ ಲಭಿಸಿತು. ನಂತರ ಅವರನ್ನು ಎಡೀಶ್ನಲ್ ನಾಝಿರ್ ಇಸ್ಲಾಹ್ ವ ಇರ್ಷಾದ್ ತಅ್‌ಲೀಮುಲ್ ಖುರ್‌ಆನ್ ವಖ್ಫೆ ಆರ್ಝಿಯಾಗಿ ನೇಮಿಸಲಾಯಿತು. ನಂತರ 2018 ರಲ್ಲಿ, ನಾನು ಅವರನ್ನು ಸದರ್ ಸದರ್ ಅಂಜುಮನ್ ಅಹ್ಮದಿಯಾವನ್ನಾಗಿ ನೇಮಿಸಿದೆ, ಮತ್ತು ಅವರು ತಮ್ಮ ಕೊನೆಯ ಉಸಿರಿನವರೆಗೂ ಆ ಸ್ಥಾನದಲ್ಲಿದ್ದರು.

ಅವರು ಖುದ್ದಾಮುಲ್ ಅಹ್ಮದಿಯಾ ಮತ್ತು ಅನ್ಸರುಲ್ಲಾದಲ್ಲಿ ಗಣನೀಯ ಕೇಂದ್ರ ಸೇವೆಗಳನ್ನು ಒದಗಿಸಲು ಸಾಧ್ಯವಾಯಿತು. ಅವರು ಅನ್ಸಾರುಲ್ಲಾದಲ್ಲಿ ಎರಡನೇ ಸಾಲಿನ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಅವರು ಖಾಲಿದ್ ಮಾಸಿಕ ಮತ್ತು ಅನ್ಸರುಲ್ಲಾ ಮಾಸಿಕದ ಸಂಪಾದಕರಾಗಿದ್ದರು. 1994 ರಲ್ಲಿ, ಅವರು ಒಂದೂವರೆ ತಿಂಗಳಿಗೂ ಹೆಚ್ಚು ಕಾಲ ಅಸೀರಾನೆ ರಾಹೆ ಮೌಲಾ (ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳುಗಳಾಗಿ) ಆಗಿ ಉಳಿಯುವ ಅದೃಷ್ಟವನ್ನು ಪಡೆದರು. ಅವರು ದಾರುಲ್ ಖಾಝಾದಲ್ಲಿ ನ್ಯಾಯಾಂಗ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ಅವರು ಮಜ್ಲಿಸ್-ಎ-ಇಫ್ತಾದ ಸದಸ್ಯರಾಗಿದ್ದರು. ಅವರು ನ್ಯಾಯಶಾಸ್ತ್ರ ಸಂಕಲನ ಸಮಿತಿಯ (ತದ್ವೀನ್ ಫಿಖ ಕಮೀಟಿ) ಸದಸ್ಯರಾಗಿದ್ದರು. ಬುಯೂತುಲ್ ಹಮ್ದ್‌ನ ಕಾರ್ಯದರ್ಶಿಯಾಗಿದ್ದರು. ಅವರು ಅರೇಬಿಕ್ ಮಂಡಳಿಯ ಅಧ್ಯಕ್ಷರೂ ಆಗಿದ್ದರು. ಅವರ ಅರೇಬಿಕ್ ತುಂಬಾ ಚೆನ್ನಾಗಿತ್ತು.

ಅವರ ಪತ್ನಿ ಹೇಳುವಂತೆ ಅವರ ಇಡೀ ಜೀವನದ ಸಾರ ಇದೇ ಆಗಿತ್ತು, ಮತ್ತು ಆ ಸಾರವು ಎಲ್ಲರನ್ನೂ ಪ್ರೀತಿಸುವುದು ಮತ್ತು ಯಾರನ್ನೂ ದ್ವೇಷಿಸುವುದು ಎಂಬುದಕ್ಕೆ ನಾನು ಸಾಕ್ಷಿಯಾಗಿದ್ದೇನೆ.

